ಅಧ್ಯಕ್ಷರು:– ಆಯಿತು, ಮಾಡುತ್ತಾರೆ. ಈಗ ಬೇಡಿಕೆಗಳ ಮೇಲೆ ಚರ್ಚೆ. ಈಗ ಯು.ಬಿ. ಬಣಕಾರ್‌ರವರು.

11. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಅನುದಾನ ಬೇಡಿಕೆಗಳ ಮೇಲೆ ಮುಂದುವರೆದ ಚರ್ಚೆ

ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು):– ಮಾನ್ಯ ಸಭಾಧ್ಯಕ್ಷರೆ, ವಸತಿ ಇಲಾಖೆಯ ಬೇಡಿಕೆಯ ಮೇಲಿನ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಮೊದಲಿಗೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ವಸತಿ ಸಚಿವರು ಈ ಸದನಕ್ಕೆ 2014–15ನೇ ಸಾಲಿಗೆ 2,457 ಕೋಟಿ ರೂಪಾಯಿಗಳ ಬೇಡಿಕೆಯನ್ನು ಸಲ್ಲಿಸಿದ್ದಾರೆ. ಈ ಬೇಡಿಕೆಯನ್ನು ಸಲ್ಲಿಸಿರುವಂಥ ಸಂದರ್ಭದಲ್ಲಿ 2013–14ನೇ ಸಾಲಿಗೆ ವಸತಿ ಇಲಾಖೆಗೆ ಕೊಟ್ಟಂಥ ಹಣವನ್ನು ಎಷ್ಟು ಸದ್ವಿನಿಯೋಗ, ಸದ್ಬಳಕೆ ಮಾಡಿದ್ದಾರೆ ಎನ್ನುವುದನ್ನು ನೋಡುವುದು ಅತ್ಯಂತ ಅವಶ್ಯಕವಾಗಿದೆ. ಯಾವುದೇ ಸರ್ಕಾರ ಆಡಳಿತವನ್ನು ನಡೆಸುವಂಥ ಸಂದರ್ಭದಲ್ಲಿ ಈ ರಾಜ್ಯದ ತೆರಿಗೆದಾರರ ಹಣವನ್ನು ರಾಜ್ಯದ ಅಭಿವೃದ್ಧಿಗೆ ಖರ್ಚು ಮಾಡಬೇಕು ಎಂದು ವಿಚಾರ ಮಾಡುವಂಥ ಸಂದರ್ಭದಲ್ಲಿ ತನ್ನ ಆಯವ್ಯಯವನ್ನು ಮಂಡಿಸುವುದು ಸಹಜ. ಆಯವ್ಯಯವನ್ನು ಮಂಡಿಸುವಂಥ ಸಂದರ್ಭದಲ್ಲಿ ಪ್ರತಿಯೊಬ್ಬರೂ ಸಹ ಅತ್ಯಂತ ಕಾತರ ಮತ್ತು ಕುತೂಹಲದಿಂದ ಯಾವಯಾವ ಹೊಸ ಯೋಜನೆಗಳನ್ನು ಜಾರಿಗೆ ತರುತ್ತಿದ್ದಾರೆ ಮತ್ತು ಯಾವಯಾವ ರಂಗಕ್ಕೆ ಎಷ್ಟು ಹಣವನ್ನು ಮೀಸಲಿಡುತ್ತಿದ್ದಾರೆ ಎಂದು ನೋಡುವಂಥ ಸಂದರ್ಭದಲ್ಲಿ, ವತಿ ಇಲಾಖೆ 2013–14ನೇ ಸಾಲಿನಲ್ಲಿ ಅತ್ಯಂತ ಕಳಪೆ ಸಾಧನೆ ಮಾಡಿರುವುದನ್ನು ನಾವು ಗಮನಿಸಬೇಕಾಗಿದೆ. ಹೊಸದಾಗಿ ಅಧಿಕಾರಕ್ಕೆ ಬಂದಂಥ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ತನ್ನ 2013–14ನೇ ಸಾಲಿನ ಆಯವ್ಯಯದಲ್ಲಿ ಒಂದು ಮಾತನ್ನು ಹೇಳಿದ್ದರು: "ರಾಜ್ಯದ ಜನತೆಯ ಬಯಕೆಗಳು ಸಹ ಬಹಳ ಹೆಚ್ಚೇನಿಲ್ಲ, ತಮ್ಮ ಸ್ವಂತದ್ದು ಎನಿಸಿಕೊಳ್ಳಲು ಒಂದು ನಿವೇಶನ, ತಲೆಯ ಮೇಲೊಂದು ಸೂರು ಇವು ಶ್ರೀಸಾಮಾನ್ಯರ ಗೌರವಯುತ

ಜೀವನಕ್ಕೆ ಬೇಕಾದ ಕನಿಷ್ಟ ಅವಶ್ಯಕತೆಗಳು ಎನ್ನುವಂಥ ಮಾತನ್ನು ಹೇಳಿದ್ದರು. ಹಿಂದುಳಿದ ವರ್ಗದವರ ಚಾಂಪಿಯನ್, ಅಲ್ಪಸಂಖ್ಯಾತರ ಚಾಂಪಿಯನ್ ಎಂದು ಹೇಳಿಕೊಳ್ಳುತ್ತಿರುವಂಥ ಈ ಸರ್ಕಾರ 2013–14ನೇ ಸಾಲಿನಲ್ಲಿ ಈ ರಾಜ್ಯದ ಎಷ್ಟು ಬಡ ಜನರಿಗೆ ಮನೆಗಳನ್ನು ಹಾಗೂ ನಿವೇಶನಗಳನ್ನು ಒದಗಿಸಿದೆ ಎನ್ನುವುದನ್ನು ನಾವು ನೋಡಿದಾಗ ಅತ್ಯಂತ ಕಳಪೆ ಸಾಧನೆಯನ್ನು ಕಾಣುತ್ತಿದ್ದೇವೆ. ಪ್ರತಿವರ್ಷ ಮೂರು ಲಕ್ಷ ಮನೆಗಳನ್ನು ಕೊಡುತ್ತೇವೆ ಎನ್ನುವ ಮಾತನ್ನು ಅವರು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದರು. ಅದನ್ನು ಸಾಕಾರಗೊಳಿಸುವ ದೃಷ್ಟಿಯಿಂದ ಪ್ರತಿ ಗ್ರಾಮ ಪಂಚಾಯಿತಿಗೆ ಇಪ್ಪತ್ತು ಮನೆಗಳಂತೆ ಒಂದು ಲಕ್ಷದ ಆರು ಸಾವಿರ ಮನೆಗಳನ್ನು ಮೊದಲು ನಿಗದಿ ಮಾಡಿದ್ದರು. ಸಚಿವರು ಪ್ರತಿಜ್ಞಾ ವಚನ ಸ್ವೀಕಾರ ಮಾಡಿದಂಥ ಸಂದರ್ಭದಲ್ಲಿ, ಪಕ್ಷಪಾತ ಮಾಡದೇ ನಡೆದುಕೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಿದ್ದರು.

ಅಧ್ಯಕ್ಷರು:– ಒಂದು ನಿಮಿಷ. ಈಗ ಸದನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಚಿವರಿದ್ದಾರೆ, ಯಾರಾದರೂ ಸದಸ್ಯರು ಆ ಇಲಾಖೆಯ ಮೇಲೆ ಮಾತನಾಡುವವರಿದ್ದರೆ ದಯವಿಟ್ಟು ಉಪಯೋಗ ಮಾಡಿಕೊಳ್ಳಿ. ಮೂಲಭೂತ ಸೌಕರ್ಯ ಇಲಾಖೆಯ ರೋಷನ್ ಬೇಗ್‌ರವರಿದ್ದಾರೆ. ಆ ಇಲಾಖೆಯ ಮೇಲೆ ಮಾತನಾಡುವವರಿದ್ದರೆ ಮಾತನಾಡಬಹುದು. ವಸತಿ ಸಚಿವರು ಬರುತ್ತಾರೆ. ಸಂಸದೀಯ ವ್ಯವಹಾರಗಳು, ಪಶುಸಂಗೋಪನೆ ಹಾಗೂ ಕಾನೂನು ಇಲಾಖೆಯ ಮೇಲೆ ಮಾತನಾಡುವಂಥ ಸದಸ್ಯರಿದ್ದರೆ, ಈಗ ಮಂತ್ರಿಗಳಿದ್ದಾರೆ, ಮಾತನಾಡಿ ಅವಕಾಶದ ಉಪಯೋಗ ಮಾಡಿಕೊಳ್ಳಿ. ಅದೇ ರೀತಿ, ನಗಾರಾಭಿವೃದ್ಧಿ ಸಚಿವರಿದ್ದಾರೆ, ಯಾರು ಆ ಇಲಾಖೆಯ ಮೇಲೆ ಮಾತನಾಡಬೇಕೆಂದಿದ್ದೀರಿ, ಅವರು ಈ ಅವಕಾಶದ ಉಪಯೋಗವನ್ನು ಮಾಡಿಕೊಳ್ಳಿ. ಎಲ್ಲರೂ ಒಂದು ಹತ್ತತ್ತು ನಿಮಿಷ ಮಾತನಾಡಿ ಬೇಗ ಮುಗಿಸಿ. ಎಲ್ಲ ಬೇಡಿಕೆಗಳೂ ಒಟ್ಟಿಗೆ ಇರುವುದರಿಂದ, ಮಾತನಾಡುವುದಕ್ಕೆ ಆಸಕ್ತಿ ಇದ್ದರೆ ಮಾತನಾಡಿ ಎಂದು ಹೇಳಿದೆ. ಬಣಕಾರ್‌ರವರದ್ದು ಆಗಿಬಿಡಲಿ. ಈ ಕಡೆಯಲ್ಲಿರುವವರೂ (ಆಡಳಿತ ಪಕ್ಷದ ಕಡೆ) ನೋಡಿ. ಹಿಂದುಗಡೆ ಕುಳಿತಿರುವ ಹುಡುಗರೂ ಯಾವುದಾದರೂ

ಇಲಾಖೆಯ ಮೇಲೆ ಮಾತನಾಡಿ. ತದನಂತರ ಸನ್ಮಾನ್ಯ ವಸತಿ ಸಚಿವರು ಏನು ಪ್ರತಿಜ್ಞಾ ವಿಧಿಯನ್ನು ಈ ಸದನದಲ್ಲಿ ಸ್ವೀಕಾರ ಮಾಡಿದ್ದರೋ ಯಾವುದೇ ಪಕ್ಷಪಾತ ಮಾಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದರು. ಆದರೂ ಸಹ 106 ತಾಲ್ಲೂಕುಗಳಿಗೆ ಹೆಚ್ಚುವರಿ ಗುರಿಯನ್ನು ಕೊಡುವುದರ ಮೂಲಕ ಮತ್ತೆ 54 ಸಾವಿರ ಮನೆಗಳನ್ನು ಕೊಟ್ಟು ರಾಜ್ಯದಲ್ಲಿ ಒಟ್ಟು 1,65,000 ಮನೆಗಳನ್ನು ಕಟ್ಟಿಸುತ್ತೇವೆಂಬ ಮಾತನ್ನು ಅವರು ಹೇಳಿದ್ದರು. ಅವರಿಗೆ 15 ತಿಂಗಳ ಅವಧಿ ಸಿಕ್ಕಿದೆ. 15 ತಿಂಗಳ ಅವಧಿಯಲ್ಲಿ ನಾವು ಅವರು ಕಟ್ಟಿದಂಥ ಮನೆಗಳ ಗುರಿ ನೋಡಿದರೆ ಕೇವಲ 18,125 ಮನೆಗಳನ್ನು ಮಾತ್ರ ಇವರು ಕಟ್ಟಿದ್ದಾರೆ. ಅದರ ಅರ್ಥ ಈ ರಾಜ್ಯದ ಸರ್ಕಾರಕ್ಕಾಗಲಿ, ಬಹು ದೊಡ್ಡ ಆಡಳಿತ ಹೊಂದಿರುವಂಥ ಇಲಾಖೆಯಾಗಲಿ, ಒಬ್ಬ ಬಡವನ ಮನೆಯನ್ನು ಕಟ್ಟಿಸಿಕೊಡಲಿಕ್ಕೆ 15 ತಿಂಗಳು ಆದರೂ ಸಹ ಸಾಧ್ಯವಾಗಿಲ್ಲ ಎಂಬುದನ್ನು ಇವತ್ತು ನಾವಿಲ್ಲಿ ಗಮನಿಸಬೇಕಾಗಿದೆ. ಆದ್ದರಿಂದ, ಈ ವಿಫಲತೆ ಏನಿದೆ, ಬಹುಶಃ ವಸತಿ ಇಲಾಖೆ ಏನು ವಿಫಲತೆಯನ್ನು ಹೊಂದಿದೆ, ನಾವು ಈಗ ಮತ್ತೆ 2457 ಕೋಟಿ ರೂಪಾಯಿಗಳ ಬೃಹತ್ ಮೊತ್ತವನ್ನು ಅವರಿಗೆ ಕೊಡಲಿಕ್ಕೆ ನಾವು ಹೊರಟ್ಟಿದ್ದೇವೆ. ಯಾರ್ಯಾರು ಈ ಯೋಜನೆಯನ್ನು ಸಫಲಗೊಳಿಸುವಲ್ಲಿ ವಿಷಲರಾಗಿದ್ದಾರೆ, ಅಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿರುವುದು ಸರ್ಕಾರದ ಕರ್ತವ್ಯ. ಇದು ಏಕೆ ವಿಫಲವಾಗಿದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ನಾವು 2014–15ನೇ ಸಾಲಿನಲ್ಲಿದ್ದೇವೆ. ಈ ಆರ್ಥಿಕ ವರ್ಷದಲ್ಲಿ ಈಗಾಗಲೇ ನಾಲ್ಕು ತಿಂಗಳು ಗತಿಸಿದೆ. ಈ ವರ್ಷದ ಗುರಿಯನ್ನು ಇಲ್ಲಿಯವರೆಗೂ ಇವರು ನಿಗದಿ ಮಾಡಿಲ್ಲ. ಗ್ರಾಮಸಭೆ ದಿನಾಂಕವನ್ನೂ ಸಹ ಇಲ್ಲಿಯವರೆಗೂ ಇವರು ನಿಗದಿ ಮಾಡಲಿಕ್ಕೆ ಆಗಲಿಲ್ಲ. ಕಳೆದ ವರ್ಷ 1,63,000 ಮನೆಗಳನ್ನು ಇವರು ಬಸವ ವಸತಿ ಯೋಜನೆಯಲ್ಲಿ ಕೊಟ್ಟಿದ್ದಾರೆಂದರೂ ಸಹ 63 ಸಾವಿರ ಮನೆಗಳಿಗೆ ಇಲ್ಲಿಯವರೆಗೆ ಸರ್ಕಾರಕ್ಕೆ ಆಯ್ಕೆ ಮಾಡಲಿಕ್ಕೆ ಸಾಧ್ಯವಾಗಿಲ್ಲ. 1,63,000 ಮನೆಗಳನ್ನು ಕೊಟ್ಟರೂ ಸಹ 63 ಸಾವಿರ ಮನೆಗಳ ಆಯ್ಕೆ ಮಾಡಲಿಕ್ಕೆ ಈಗಾಗಲೇ 15 ತಿಂಗಳು ಕಳೆದರೂ ಸಹ ಇವರಿಂದ ಸಾಧ್ಯವಾಗಲಿಲ್ಲ. ಆ

ಕಾರಣದಿಂದ ಪ್ರತಿಯೊಂದು ಗ್ರಾಮಸಭೆಗೂ ಕೂಡ ಒಂದೊಂದು ದಿನಾಂಕವನ್ನು ಇವರು ನಿಗದಿ ಮಾಡಬೇಕು. ಯಾವ ದಿನಾಂಕದಂದು ಗ್ರಾಮ ಸಭೆ ನಡೆಸಬೇಕು? ಯಾವ ದಿನಾಂಕದಂದು ತಾಲ್ಲೂಕಾ ಜಾಗೃತ ಸಮಿತಿ ನಿಗದಿಯಾಗಬೇಕು? ಹಾಗೆಯೇ ಹೊಸ GPS system ತಂದಿದ್ದಾರೆ. ಹೊಸ GPS system ತಂದಾಗ ಆ ಬಡವ ಗ್ರಾಮಪಂಚಾಯತಿಯ PDO ಹತ್ತಿರ ಹೋಗಿ ನನ್ನ ಮನೆಯನ್ನು GPS ಮಾಡಿ ಎಂದು ಹೇಳಿ ಅವನಿಗೆ ಹಣ ಕೊಡಬೇಕು. ಅವನು ಬಂದಾಗ ಅದು GPS ಆಗಬೇಕು. ಆದ್ದರಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ಏನು ಅನೇಕ ತೊಂದರೆಗಳನ್ನು ನಾವು ಅನುಭವಿಸುತ್ತಿದ್ದೇವೆ, ಅವೆಲ್ಲದಕ್ಕೆ ಹೊಸ ನಿಯಮವನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಬಹುಶಃ ಯಾವುದೇ ಪಕ್ಷಪಾತ ಮಾಡತಕ್ಕಂಥದ್ದಲ್ಲ. ಇದರಲ್ಲಿ ರಾಜ್ಯದ ತೆರಿಗೆದಾರನ ಹಣವನ್ನು ಇವತ್ತು ನಾವು ಉಪಯೋಗ ಮಾಡುತ್ತಿರುವಂಥ ಸಂದರ್ಭದಲ್ಲಿ ಪ್ರತಿಯೊಂದು ತಾಲ್ಲೂಕಿಗೂ ಸಮಾನವಾಗಿ ಮನೆಗಳನ್ನು ಹಂಚುವಂಥ ಕೆಲಸವನ್ನು ಇವರು ಮಾಡಬೇಕು. ಹಾಗೂ ಪ್ರತಿ ಗ್ರಾಮ ಪಂಚಾಯತಿಗೆ ಏನು 20 ಮನೆಗಳನ್ನು ಕೊಡುತ್ತಿದ್ದೀರಿ, ಕೆಲವೊಂದು ಗ್ರಾಮ ಪಂಚಾಯತಿಗೆ 60 ಜನ ಸದಸ್ಯರಿದ್ದಾರೆ. ಕೆಲವೊಂದು ಗ್ರಾಮಪಂಚಾಯತಿಯಲ್ಲಿ ಕೇವಲ 9 ಜನ ಸದಸ್ಯರಿದ್ದಾರೆ. ಬಹುಶಃ ಆ ಜನಸಂಖ್ಯೆಯ ಆಧಾರದ ಮೇಲೆ ಗ್ರಾಮ ಪಂಚಾಯತಿಗಳಿಗೆ ಮನೆಗಳನ್ನು ನಿಗದಿ ಮಾಡುವ ಕಾರ್ಯವನ್ನು ಈ ಸರ್ಕಾರ ಮಾಡಬೇಕಾಗಿದೆ. ಹಾಗೂ ನಿವೇಶನರಹಿತರು, ವಸತಿರಹಿತರಿಗೆ ಮನೆಯನ್ನು ಕೊಡುವಲ್ಲಿ ಈ ಸರ್ಕಾರ ವಿಫಲವಾದ ಸಂದರ್ಭದಲ್ಲಿ, ನಿವೇಶನ ಹಂಚುವುದರಲ್ಲಿ ಅದಕ್ಕಿಂತ ಹೆಚ್ಚಿಗೆ ಅದೋಗತಿಗೆ ಹೋಗಿದೆ. 20 ಸಾವಿರ ನಿವೇಶನಗಳನ್ನು ಸರ್ಕಾರ ಕೊಡಬೇಕೆನ್ನುವ ಗುರಿಯನ್ನು ಹಾಕಿಕೊಂಡಿದ್ದರೂ ಸಹ ಕೇವಲ 10 ಸಾವಿರ ನಿವೇಶನಗಳನ್ನು ಮಾತ್ರ ಕೊಟ್ಟಿದ್ದಾರೆ. ಇವತ್ತು ವಸತಿ ಸಚಿವರು ಪ್ರತಿನಿಧಿಸುವ ಮಂಡ್ಯ ಜಿಲ್ಲೆಯಲ್ಲಿ ವಸತಿ ಸಚಿವರಿಗೆ ಕೇವಲ 169 ನಿವೇಶನವನ್ನು ಮಾತ್ರ ಹಂಚಲಿಕ್ಕೆ ಸಾಧ್ಯವಾಗಿದೆ. ಹಾಗೂ ಮಾನ್ಯ ಮಖ್ಯಮಂತ್ರಿಯವರು ಪ್ರತಿನಿಧಿಸುವ ಮೈಸೂರು ಜಿಲ್ಲೆಗೆ ಕೇವಲ

300. ಹಾಗಾದರೆ ಇವರಿಗೆ ವರ್ಷಕ್ಕೆ ಕೇವಲ 10,000 ನಿವೇಶನಗಳನ್ನು ಮಾತ್ರ ಕೊಡುವುದಕ್ಕೆ ಸಾಧ್ಯವಾಗುವುದಾದರೆ ಸರ್ಕಾರ ಮುಂದೆ ಯಾವ ರೀತಿಯಾಗಿ ಬಡವರಿಗೆ ನಿವೇಶನ ಕೊಡಲಿಕ್ಕೆ ಸಾಧ್ಯ? ಬಹುಶಃ ಗ್ರಾಮಾಂತರ ಪ್ರದೇಶದಲ್ಲಿ 1 ಎಕರೆ ಕೇವಲ 6 ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದಾರೆ. ಯಾವುದೇ ಭೂಮಿ 1 ಎಕರೆಗೆ 6 ಲಕ್ಷ ರೂ.ನಂತೆ ಸಿಗುವುದಕ್ಕೆ ಸಾಧ್ಯವಿಲ್ಲ. ಅದರ ಪ್ರಮಾಣವನ್ನು ಇವರು ಹೆಚ್ಚಿಗೆ ಮಾಡಬೇಕು. ಕಳೆದ ಆಯವ್ಯಯದಲ್ಲಿ 'ಹೊಸ ಭೂಮಿ ಖರೀದಿ ನೀತಿಯನ್ನು ಜಾರಿಗೆ ತರುತ್ತೇವೆ' ಎಂಬ ಮಾತನ್ನು ಹೇಳಿದ್ದರು. ಇಲ್ಲಿಯವರೆಗೂ ಆ ನೀತಿಯನ್ನು ಇವರು ಜಾರಿಗೆ ತಂದಿಲ್ಲ. ಬಹುಶಃ ಎಲ್ಲಿಯವರೆಗೆ ಹೊಸದಾಗಿ ರೈತರ ಜಮೀನುಗಳನ್ನು ಖರೀದಿ ಮಾಡುವುದಕ್ಕೋಸ್ಕರ ನೀತಿಯನ್ನು ಇವರು ರಚನೆ ಮಾಡಲಿಕ್ಕೆ ಆಗುವುದಿಲ್ಲ, ಅಲ್ಲಿಯವರೆಗೆ ಇವರು ನಿವೇಶನ ಹಂಚಲಿಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣದಿಂದ ಕೂಡಲೇ ಹೊಸ ಭೂಮಿ ಖರೀದಿ ನೀತಿಯನ್ನು ಜಾರಿಗೆ ತರುವುದರ ಮೂಲಕ ಭೂಮಿಯನ್ನು ಖರೀದಿ ಮಾಡಿ ಬಡವರಿಗೆ ನಿವೇಶನ ಹಂಚುವ ಕೆಲಸ ಈ ಸರ್ಕಾರ ಮಾಡಬೇಕಾಗಿದೆ. ಆದ್ದರಿಂದ, ನಾನು ಮತ್ತೊಮ್ಮೆ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ವರ್ಷವಾದರೂ ಸಹ 2013-14ನೇ ಸಾಲಿನಲ್ಲಿ ಈ ಸರ್ಕಾರ ಈ ಯೋಜನೆಯನ್ನು ಅನುಷ್ಠಾನಗೊಳಿಸುವಲ್ಲಿ ವಿಫಲವಾಗಿದೆ. ಆ ವಿಫಲತೆಗೆ ಕಾರಣಗಳನ್ನು ಕಂಡುಹಿಡಿದು ಈ ವರ್ಷ ಪೂರ್ಣ ಪ್ರಮಾಣದಲ್ಲಿ ಮನೆಗಳನ್ನು ಕಟ್ಟಿಸಲಿಕ್ಕೆ, ನಿವೇಶನಗಳನ್ನು ಹಂಚಲಿಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ, ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಎನ್. ಬಾಲಕೃಷ್ಣ (ಶ್ರವಣಬೆಳಗೊಳ):- ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಮಾತನಾಡಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ತಮ್ಮಲ್ಲಿ ಮನವಿ ಮಾಡಿ, ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಬಹುತೇಕ ಪ್ರತಿ ತಾಲ್ಲೂಕಿನಲ್ಲೂ ಕೂಡ ಸುಮಾರು 200 ಗ್ರಾಮಗಳಲ್ಲಿ

ಅಂಗನವಾಡಿ ಕೇಂದ್ರಗಳು ಪ್ರಾರಂಭವಾಗಿದ್ದರೂ ಸಹ ಕಟ್ಟಡಗಳ ಕೊರತೆಯಿಂದ ಮಕ್ಕಳಿಗೆ ಅಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಾಗಿದೆ. ಅದರಿಂದ, ಬಹುಶಃ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಸಮಸ್ಯೆ ಇದೆ. ಕೇವಲ ನಮ್ಮ ಒಂದೇ ವಿಧಾನಸಭಾ ಕ್ಷೇತ್ರ ಎಂದಲ್ಲ. ಇಡೀ ರಾಜ್ಯಾದ್ಯಂತ ಈ ಸಮಸ್ಯೆ ಇದೆ. ಇದಕ್ಕೆ ಸೂಕ್ತವಾದ ಅನುದಾನವನ್ನು ಈ ಸಾಲಿನಲ್ಲಿ ಹೆಚ್ಚುವರಿಯಾಗಿ ನೀಡುವುದಕ್ಕೆ ಕ್ರಮ ಕೈಗೊಳ್ಳಬೇಕು. ಏಕೆಂದರೆ, ಯಾವಾಗ ಕೇಳಿದರೂ ಕೂಡ ಕಟ್ಟಡಕ್ಕೆ ಕೇಂದ್ರದಿಂದ ಹಣ ಬರಬೇಕು ಎಂದು ಹೇಳುತ್ತಾರೆ. ಆದರೆ, ರಾಜ್ಯ ಸರ್ಕಾರ ಕೂಡ ಇದಕ್ಕೆ involve ಆಗಿ ಹೆಚ್ಚಿನ ಅನುದಾನವನ್ನು ಒದಗಿಸಿಕೊಟ್ಟರೆ ಅಲ್ಲಿಗೆ ಸೂಕ್ತವಾದ ಕಟ್ಟಡಗಳನ್ನು ನಿರ್ಮಾಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆಯವರು ಅವಕಾಶವನ್ನು ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ. ಅದೇ ರೀತಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಹುಶಃ ನಾವು ಆ ಇಲಾಖೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನಮ್ಮ ತಾಲ್ಲೂಕಿನಲ್ಲೂ ಸಹ ಬಹಳಷ್ಟು ಹೆಚ್ಚು ಕಲಾವಿದರನ್ನು ಹೊಂದಿರುವಂಥ ತಾಲ್ಲೂಕು. ಸುಮಾರು 450 ರಿಂದ 500 ಜನ ಉತ್ತಮ ಕಲಾವಿದರು ಇರತಕ್ಕಂಥದ್ದು. ನಾವು ಬಯಲು ರಂಗಮಂದಿರಕ್ಕೆ ಅನುದಾನವನ್ನು ಒದಗಿಸಿ ಎಂದು ಕೇಳಿದಂಥ ಸಂದರ್ಭದಲ್ಲಿ, ರಾಜ್ಯದಲ್ಲಿ ಕೇವಲ 80 ರಿಂದ 90 ಲಕ್ಷ ಮಾತ್ರ ಈ ಬಾಬ್ತಿಗೆ ಅವಕಾಶವಿದೆ. ಈ ನಿಟ್ಟಿನಲ್ಲಿ ನಾವು ಹೆಚ್ಚು ಅನುದಾನವನ್ನು ಕೊಡುವುದಕ್ಕಾಗುವುದಿಲ್ಲವೆಂಬ ಭಾವನೆಯನ್ನು ವ್ಯಕ್ತ ಮಾಡಿದ್ದಾರೆ. ಆದ್ದರಿಂದ, ಬಯಲುಮಂದಿರ ನಿರ್ಮಾಣಕ್ಕೆ ಪ್ರತಿ ತಾಲ್ಲೂಕು headquarter ನಲ್ಲಿ 15 ಲಕ್ಷ ದಿಂದ 20 ಲಕ್ಷ ರೂಪಾಯಿಗಳನ್ನು ಅನುದಾನವನ್ನು ಒದಗಿಸಿಕೊಟ್ಟರೆ ಕಲಾವಿದರಿಗೆ ಪ್ರೋತ್ಸಾಹಿಸಿದ ಹಾಗೆ ಆಗುತ್ತದೆ. ಇದಕ್ಕೆ ಮಾನ್ಯ ಸಚಿವರು ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ. ಏಕೆಂದರೆ, ನಾವು ಕೇವಲ ಅರ್ಜಿ ಕೊಡುತ್ತೇವೆ, estimate ಮಾಡಿಸುತ್ತೇವೆ, ಅದಕ್ಕೆ ಅನುದಾನ ಬರಲಿಲ್ಲವೆಂದರೆ ಕ್ಷೇತ್ರದಲ್ಲಿ ನಮ್ಮ ಜನರು ಕೂಡ ನಮ್ಮ ಬಗ್ಗೆ ತಪ್ಪು ಭಾವನೆಗಳನ್ನು ಕಲ್ಪಿಸಿಕೊಳ್ಳುತ್ತಾರೆ. ಆದ್ದರಿಂದ, ಘನ

ಸರ್ಕಾರ ಈ ಒಂದು ಸಾಲಿನಲ್ಲಿ ಬಯಲು ಮಂದಿರ ನಿರ್ಮಾಣಕ್ಕೂ ಹೆಚ್ಚಿನ ಆದ್ಯತೆಯನ್ನು ನೀಡಬೇಕು. ಅದೇ ರೀತಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಡಿಯಲ್ಲಿ ಆಶಾ ಕಾರ್ಯಕರ್ತೆಯರು ಆರೋಗ್ಯದ ಹಿತದೃಷ್ಟಿಯಿಂದ ಕೆಲಸ ಮಾಡುತ್ತಾರೆ. ಅವರು ಹಳ್ಳಿ ಮತ್ತು ತಾಲ್ಲೂಕು ಆಸ್ಪತ್ರೆಗಳ ನಡುವೆ ಸಂಪರ್ಕವಾಗಿ ಹಳ್ಳಿಯಿಂದ ರೋಗಿಗಳನ್ನು ಕರೆದುಕೊಂಡು ಹೋಗುವ ಸಂದರ್ಬದಲ್ಲಿ ಆ ಆಶಾ ಕಾರ್ಯಕರ್ತೆಯರಿಗೆ ನೀಡುತ್ತಿರತಕ್ಕಂಥ ಸಂಭಾವನೆ ಬಹಳ ಕಡಿಮೆ ಇದೆ. ಆದ್ದರಿಂದ, ಸರ್ಕಾರ ಇದನ್ನು ಪರಿಶೀಲನೆ ಮಾಡಿ ಪರಿಷ್ಕರಿಸಿ ಹೆಚ್ಚಿನ ಸಂಭಾವನೆಯನ್ನು ಕೊಡುವ ನಿಟ್ಟಿನಲ್ಲಿ ಸಹಕಾರವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಬಯಸುತ್ತೇನೆ. ಅದೇ ರೀತಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ 4 ತಿಂಗಳ ಹಿಂದೆ DPR ಮಾಡಿ ಪ್ರತಿ ತಾಲ್ಲೂಕಿಗೆ 30 ಕೋಟಿ ರೂ.ಗಳಂತೆ DMA ಮೂಲಕ ರಾಜ್ಯ ಸರ್ಕಾರದ SLAC Committee ನಲ್ಲಿಯೂ ಕೂಡ approve ಮಾಡಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಆದರೆ, ಇದುವರೆಗೂ ಯಾವ ಹಂತದಲ್ಲಿದೆ ಎನ್ನುವುದು ನಮಗೆ ತಿಳಿದಿಲ್ಲ. ಬಹುಶಃ ಅದು ವಾಪಸ್ಸು ಬಂದಿದೆ ಎಂದು ಸಂಬಂಧಪಟ್ಟ ಅಧಿಕಾರಗಳಿಂದ ನಮಗೆ ತಿಳಿದುಬಂದಿದೆ. ಆದರೆ, DPR ಮಾಡಿಸತಕ್ಕಂಥ ಸಂದರ್ಭದಲ್ಲಿ ಸುಮಾರು 3–4 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅದನ್ನು DPR ಮಾಡಿ, ಅಗತ್ಯವಾಗಿ ಬೇಕಾಗಿರತಕ್ಕಂಥ ರಸ್ತೆಗಳಿರಬಹುದು, drainage ಇರಬಹುದು, ನಗರದ ಸೌಂದರ್ಯಕರಣಕ್ಕೆ ಬೇಕಾದ ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕಂಥದ್ದಕ್ಕೆ 30 ಕೋಟಿ ರೂಪಾಯಿಗಳ project ಮಾಡಿರುವಂಥದ್ದು. ಇದು ಕೇವಲ ನನ್ನ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದ್ದಲ್ಲ. ಸುಮಾರು 60–70 ತಾಲ್ಲೂಕುಗಳಿಂದ DPR ಮಾಡಿಸಿ, DMA ಮೂಲಕ State SLAC Committee ಮೂಲಕ ಕೇಂದ್ರ ಸರ್ಕಾರಕ್ಕೆ ಬಂದು ವಾಪಸ್ಸು ಆಗಿದೆ. ಅದಕ್ಕೆ ಅದು ವಾಪಸ್ಸು ಬಂದಿರುವ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವರು ಕೇಂದ್ರ ಮಟ್ಟದಲ್ಲಿ ಪ್ರಯತ್ನ ಮಾಡಿ ಇದನ್ನು ಮಂಜೂರಾತಿ ಮಾಡಿಸಿಕೊಡತಕ್ಕಂಥ ಒಂದು ಅವಕಾಶವನ್ನು ಮಾಡಿಕೊಡಬೇಕೆಂದು ಮನವಿ ಮಾಡುತ್ತೇನೆ. ಇನ್ನು

UGD ಸೌಲಭ್ಯದ ಬಗ್ಗೆ ಹೇಳುವುದಾದರೆ, ಈ ಹಿಂದಿನ ಸಾಲುಗಳಲ್ಲಿ ನಮಗೆ ಸರ್ಕಾರ ಮಂಜೂರಾತಿ ಮಾಡಿ UGD ಸೌಲಭ್ಯವನ್ನು ಕಲ್ಪಿಸಿದೆ. ಉದಾಹರಣೆಗೆ ನನ್ನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಮಾರು 40 ಸಾವಿರ population ಇದೆ. ಈಗ ಕೊಟ್ಟಿರುವ ಸೌಕರ್ಯ ಸಾಕಾಗುತ್ತಿಲ್ಲ. ಬಡಾವಣೆಗಳು ದೊಡ್ಡದಾಗಿ ಬೆಳೆದಿವೆ. ಈ ಸಂದರ್ಭದಲ್ಲಿ ಕೂಡಲೇ ಅದನ್ನು survey ಮಾಡಿಸಿ ಇನ್ನೂ ಹೆಚ್ಚುವರಿಯಾಗಿ ಏನು UGD ಸೌಲಭ್ಯ ಬೇಕಾಗಿದೆ, ಅದಕ್ಕೆ ಪೂರಕವಾದ ಅನುದಾನವನ್ನು ಒದಗಿಸಿಕೊಟ್ಟು ಈ ಸಾಲಿನಲ್ಲಿ ಸ್ವಚ್ಛತೆಯ ದೃಷ್ಟಿಯಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಅದೇ ರೀತಿ 3rd stage water supply ಕೂಡ 53 ಕೋಟಿ ರೂಪಾಯಿಗಳಿಗೆ ಮಂಜೂರಾತಿ ಆಗಿದೆ. Technical sanction ಮಾತ್ರ ಆಗಿದೆ. ಆಡಳಿತಾತ್ಮಕ ಅನುಮೋದನೆ ದೊರೆತು tender ಪ್ರಕ್ರಿಯೆ ಕೂಡ ಆಗಬೇಕಾಗಿದೆ. ಅದಕ್ಕೂ ಸಹ ಈ ಸಾಲಿನಲ್ಲಿಯೇ ಆ tender ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕಾಮಗಾರಿಯನ್ನು ಕೈಗೆತ್ತಿಕೊಂಡು ನಗರದ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ಅದೇ ರೀತಿ ಎಲ್ಲಾ ತಾಲ್ಲೂಕು ಕೇಂದ್ರಗಳಿಗೆ ಅಂಟಿಕೊಂಡಿರತಕ್ಕಂಥ ಅದರ ವ್ಯಾಪ್ತಿ ಇರತಕ್ಕಂಥ ಕೆರೆಗಳನ್ನು ಅಭಿವೃದ್ಧಿ ಪಡಿಸತಕ್ಕಂಥದ್ದಕ್ಕೆ ಏಕೆಂದರೆ Government of India ದಲ್ಲಿ Lake Development Authority ಎಂದು ಏನು ಪ್ರತ್ಯೇಕ Department ಇದೆ, ಅದರಿಂದ ಹೆಚ್ಚಿನ ಅನುದಾನವನ್ನು ಪಡೆದುಕೊಳ್ಳುವುದಕ್ಕೆ ರಾಜ್ಯ ಸರ್ಕಾರಕ್ಕೆ ಅವಕಾಶವಿರುವಂಥ ಈ ಸಂದರ್ಭದಲ್ಲಿ ಇವತ್ತು ಚನ್ನರಾಯಪಟ್ಟಣದ ಪಕ್ಕದಲ್ಲಿಯೇ ಅಮಾನಿ ಕೆರೆ ಎನ್ನುವ ಒಂದು ದೊಡ್ಡ ಕೆರೆ ಇದೆ. ಬಹುಶಃ ಅದನ್ನು approval ಮಾಡಿಸತಕ್ಕಂಥದ್ದಕ್ಕೆ ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಈ ಮೂಲಕ ಮನವಿ ಮಾಡುತ್ತೇನೆ. ಪ್ರತಿ ತಾಲ್ಲೂಕು headquater ನಲ್ಲೂ ಕೂಡ slum ಎಂದು declare ಆಗಿದೆ. ಉದಾಹರಣೆಗೆ ನಮ್ಮ ವಿಧಾನಸಭಾ ಕ್ಷೇತ್ರಕ್ಕೆ

ಸಂಬಂಧಿಸಿದಂತೆ ಚನ್ನರಾಯಪಟ್ಟಣ ನಗರದಲ್ಲೂ ಕೂಡ ಸುಮಾರು 10 slum ಗಳೆಂದು declare ಆಗಿದೆ. ಆ slum ಗಳ ವ್ಯಾಪ್ತಿಯಲ್ಲಿರುವ ಮನೆಗಳು ತುಂಬಾ ಶಿಥಿಲಗೊಂಡು ಅವುಗಳನ್ನು ಪುನರ್‍ನಿರ್ಮಾಣ ಮಾಡತಕ್ಕಂಥದ್ದಕ್ಕೂ ತುಂಬಾ ಕಷ್ಟವಾಗಿದೆ. ಬಡತನದಿಂದ ಅವರು ಮನೆಗಳನ್ನು ನವೀಕರಣ ಗೊಳಿಸುವಂಥದ್ದೂ ಕೂಡ ಕಷ್ಟವಾಗಿದೆ. ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರದಿಂದ ಇದಕ್ಕೂ ಕೂಡ ಹೆಚ್ಚಿನ ಅನುದಾನವನ್ನು ತರುವಂಥದ್ದಕ್ಕೆ, ಅವರಿಗೆ ಪುನರ್‍ನಿರ್ಮಾಣ ಮಾಡಿಕೊಡುವಂಥ ಯೋಜನೆಗೆ ಅವಕಾಶವನ್ನು ಮಾಡಿಕೊಡಲಿಕ್ಕೆ ಅವಕಾಶವಿರುವಂಥ ಈ ಸಂದರ್ಭದಲ್ಲಿ ರಾಜ್ಯ ಸರ್ಕಾರ ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಸಹಕಾರವನ್ನು ಪಡೆದುಕೊಂಡು ನಗರ ಪ್ರದೇಶಗಳಲ್ಲಿರುವಂಥ slum ಗಳ ಅಭಿವೃದ್ಧಿಗೆ ಆದ್ಯತೆಯನ್ನು ನೀಡಬೇಕೆಂದು ಮನವಿ ಮಾಡುತ್ತೇನೆ. ಅದೇ ರೀತಿಯಲ್ಲಿ SFC ಯೋಜನೆಯಡಿಯಲ್ಲಿ ಇವತ್ತು ಪುರಸಭೆಗೆ ನೀಡುತ್ತಿರತಕ್ಕಂಥ ಅನುದಾನ ತುಂಬಾ ಕಡಿಮೆಯಾಗಿದೆ. ಒಂದು ಪುರಸಭೆಗೆ ಎರಡೂವರೆ, ಎರಡು ಮುಕ್ಕಾಲುಕೋಟಿ ಹಣ ನೀಡಲಾಗುತ್ತಿದೆ. ಅದನ್ನು ವಿವಿಧ ಯೋಜನೆಗಳಿಗೆ ಹಂಚಿಕೆ ಮಾಡಬೇಕಾಗುತ್ತದೆ. ಅದರಲ್ಲಿ waste segregation ಕೂಡ separate ಮಾಡಬೇಕಾಗುತ್ತದೆ. Park development ಗೆ ಪ್ರತ್ಯೇಕವಾಗಿ ಅನುದಾನವನ್ನು ನಿಗದಿ ಮಾಡಬೇಕಾಗುತ್ತದೆ. ಕೇವಲ ನಮಗೆ road ಮತ್ತು drainage ಮಾಡತಕ್ಕಂಥದ್ದಕ್ಕೆ ಕೇವಲ ಎರಡೂವರೆ ಕೋಟಿ ರೂಪಾಯಿಗಳನ್ನು ಕೊಟ್ಟರೆ ಒಂದು ಮುಕ್ಕಾಲು ಕೋಟಿಗೆ ಮಾತ್ರ ಅವಕಾಶವಾಗುತ್ತದೆ. ಆದ್ದರಿಂದ SFC ಯೋಜನೆಯಡಿಯಲ್ಲಿ ರಸ್ತೆಗಳು ಮತ್ತು drainage ಅಭಿವೃದ್ಧಿಗೆ ಹೆಚ್ಚಿನ ಅನುದಾನ ಒದಗಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಅದೇ ರೀತಿ ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ನಗರದ ಸೌಂದರ್ಯಕರಣಕ್ಕೆ, ಏಕೆಂದರೆ ಬಡಾವಣೆಗಳು ದಿನೇ ದಿನೇ ಬೆಳೆಯುತ್ತಿದೆ. ಆದ್ದರಿಂದ, ಅದಕ್ಕೆ ಪೂರಕವಾದ ಎಲ್ಲಾ ಅನುದಾನವನ್ನು ಕೊಡಿಸತಕ್ಕಂಥದ್ದಕ್ಕೆ

ಅವಕಾಶವನ್ನು ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಮನವಿ ಮಾಡುತ್ತೇನೆ. ನಗರಾಭಿವೃದ್ಧಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಗುರುಪಾಟೀಲ್ ಶಿರವಾಳ (ಶಹಾಪುರ):- ಮಾನ್ಯ ಉಪಾಧ್ಯಕ್ಷರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಾಭಿವೃದ್ಧಿ ಮತ್ತು ಪಶುಸಂಗೋಪನೆ ಇಲಾಖೆ ಮೇಲೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳು. ಕನ್ನಡ ಮತ್ತು ಸಂಸ್ಕೃತಿ ಇಲಖೆಯ ಪ್ರಾಚ್ಯ ವಸ್ತು ಇಲಾಖೆಯಲ್ಲಿ ಬರತಕ್ಕಂಥ ಕೆಲವು ಗ್ರಾಮಗಳು, ನನ್ನ ಕ್ಷೇತ್ರದಲ್ಲಿವೆ. ನನ್ನ ಸ್ವಂತ ಊರಾದ ಶಿರವಾಳದಲ್ಲಿ ಐತಿಹಾಸಿಕವಾದ ಸ್ಥಳಗಳಿವೆ. ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದಂಥ ದೇಗುಲಗಳು, ಸುಮಾರು 360 ಲಿಂಗಗಳಿವೆ. ಆದರೆ, ಈಗ ಆ ಲಿಂಗಗಳಲ್ಲಿ ಕೆಲವನ್ನು ಎತ್ತಿಕೊಂಡು ಹೋಗಿದ್ದಾರೆ, ಬರೀ ದೇಗುಲ ಮಾತ್ರ ಅಲ್ಲಿದೆ. ಈ ಐತಿಹಾಸಿಕ ದೇಗುಲಗಳು, ನಾವು ಹಂಪಿಯಲ್ಲಿ ಹೋಗಿ ನೋಡುವುದಕ್ಕೂ ಮತ್ತು ಇಲ್ಲಿಗೂ architectural ಏನು ಆ ಸೌಂದರ್ಯವನ್ನು ಕೊಟ್ಟಿದ್ದಾರೆ, ಬಹಳ ವ್ಯತ್ಯಾಸ ಮತ್ತು ಬಹಳ ಸೌಂದರ್ಯದಿಂದ ಕೂಡಿದೆ. ಈ ವಿಷಯದ ಮೇಲೆ ಸುಮಾರು ಜನರು ಅಲ್ಲಿಗೆ ಬಂದು ಅದನ್ನೆಲ್ಲ ವಿಶ್ಲೇಷಣೆ ಮಾಡಿದ್ದಾರೆ. ಅದರ ಕುರಿತಾದ ಪುಸ್ತಕಗಳನ್ನು ಬಿಡುಗಡೆ ಮಾಡಿದ್ದಾರೆ. ಆದರೆ, ಅಲ್ಲಿ ಅಭಿವೃದ್ಧಿಪಡಿಸತಕ್ಕಂಥ ಯಾವುದೇ ಕೆಲಸಗಳು ನಡೆದಿಲ್ಲ. ಮಾನ್ಯ ಸಚಿವರಿಗೆ ವಿನಂತಿ ಮಾಡುವುದೇನೆಂದರೆ, ಈ ಐತಿಹಾಸಿಕ ಸ್ಥಳವನ್ನು ತಾವು ಆದ್ಯತೆ ಮೇರೆಗೆ ತೆಗೆದುಕೊಂಡು ಇದನ್ನು ಅಭಿವೃದ್ಧಿ ಮಾಡುವಂಥ ಕೆಲಸ ಆಗಬೇಕು. ಅದೇ ರೀತಿಯಲ್ಲಿ ಇದಕ್ಕೆ ಆತುಕೊಂಡಿರುವಂತೆ ಶಿರವಾಳ ಆದನಂತರ ಸೊಣ್ಣೆತ್ತಿ ಬರುತ್ತದೆ. ಅಲ್ಲಿ ಪ್ರಾಚ್ಯವಸ್ತು ಇಲಾಖೆಯಿಂದ ಈಗ ಅಶೋಕ inscriptions ಏನು ಸಿಕ್ಕಿತು, ಅಲ್ಲಿ ಸಾಕಷ್ಟು ಅಧ್ಯಯನ ನಡೆಯುತ್ತಿದೆ. ಅಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮೊದಲು ಮಾಡಿದ್ದರು. ಆದರೆ ಈಗ ಅಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ಕಾಣುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಈ ಶಿರವಾಳ,

ಸೊಣ್ಣೆತ್ತಿ ಇನ್ನೊಂದು ಗೋಗಿಕೋನ ಎಂದು ಒಂದು ಹಳ್ಳಿ ಬರುತ್ತದೆ. ಅಲ್ಲಿ ಬಹಳ ಐತಿಹಾಸಿಕವಾದಂಥ ಚಾಂದ್ ಹುಸೇನರ ದರ್ಗಾ ಇದೆ. ಈ ದರ್ಗಾಕ್ಕೆ ಬಹಳ ಹಿನ್ನೆಲೆ ಇದೆ. Adil Shahis of Bijapur ಅವರ ಗುರು ಈತ ಚಾಂದ್‌ಹುಸೇನ ಗೋಗಿ. Adil Shahis and the Moguls, they were the relatives. All the administrative reforms of the Delhi Moguls, ಈ ಚಾಂದ್‌ಹುಸೇನ ನಿಂದ ಹೋಗುತ್ತಿತ್ತು. ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳು ನಮ್ಮ ಹತ್ತಿರ ಇದೆ. ಅಂಥ ಐತಿಹಾಸಿಕವಾದಂಥ ಈ ದರ್ಗಾ ಆ ಆದಿಲ್‌ಶಾಹಿ ಬಿಜಾಪುರದ ಗೋರಿ ಸಹಿತ ಇಲ್ಲಿ ನಮ್ಮ ಗೋಗಿಯಲ್ಲಿಯೇ ಆಗಿದೆ. ಇಂಥ ಒಂದು ಐತಿಹಾಸಿಕವಾದ ದರ್ಗಾ ಈಗ ಹಾಳುಬಿದ್ದಿದೆ. ಅದಕ್ಕೆ ನಾನು ಮಾನ್ಯ ಸಚಿವರಲ್ಲಿ ಒತ್ತಾಯ, ಮನವಿ ಮಾಡುವುದೇನೆಂದರೆ, ಈ ಎಲ್ಲಾ ಕ್ಷೇತ್ರವನ್ನು ಅಭಿವೃದ್ಧಿಪಡಿಸಿ ಒಂದು tourism hub ಎನ್ನುವ ಹಾಗೆ ಅದನ್ನು declare ಮಾಡಬೇಕೆಂದು ಕೋರುತ್ತೇನೆ. ಇನ್ನು ವಸತಿಯಲ್ಲಿ ಗ್ರಾಮಸಭೆಗಳ ಮೂಲಕ ಏನು ಹಂಚಿಕ ಮಾಡುತ್ತಿದ್ದಾರೆ, ಬೇರೆ ಕಡೆ ಏನಿದೆಯೋ ನನಗೆ ಗೊತ್ತಿಲ್ಲ. ನಮ್ಮ ಯಾದಗಿರಿ ಜಿಲ್ಲೆ, ಗುಲಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಯಾವುದೇ ಗ್ರಾಮಸಭೆಗಳು ನಡೆಯುವುದಿಲ್ಲ. ಎಲ್ಲ ಸದಸ್ಯರು, 50 ಜನ ಸೇರಿ ಆ PDO ಮತ್ತು ಅಧ್ಯಕ್ಷರು ಎಲ್ಲ ಒಂದು ಕಡೆ ಸೇರಿ, ಅವರೇ ಒಂದು ಪಟ್ಟಿಯನ್ನು ready ಮಾಡುವುದು, ಅಲ್ಲಿಯೇ ಒಂದು videography ಮಾಡುವುದು, ನಾವು ಗ್ರಾಮಸಭೆ ಮಾಡಿದ್ದೇವೆ ಎನ್ನುವಂತೆ ಅದನ್ನು ತೋರಿಸಿ, ತಮಗೆ ಬೇಕಾದವರಿಗೆ, ಅವರ ಅಳಿಯ, ಅವರ ತಂಗಿ ಅವರ ಮಾವನಿಗೋ, ಹೀಗೆ ಎಲ್ಲರಿಗೂ ಒಂದೊಂದು ಮನೆ ಹಂಚಿಕೊಳ್ಳುತ್ತಾರೆ. 10 ವರ್ಷಗಳಾಯಿತು. ನನ್ನ ಶಹಪೂರ ಕ್ಷೇತ್ರದಲ್ಲಿ ಒಬ್ಬ ಬಡವನಿಗೂ ಸಹ ಮನೆ ಸಿಕ್ಕಿಲ್ಲ. ಇದಕ್ಕೋಸ್ಕರ ನಾವು ಬಹಳ ದೊಡ್ಡ ಹೋರಾಟ ಮಾಡಿದೆವು. ಆದರೂ ಸಹಿತ ಅಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ. ಈ ಗ್ರಾಮಸಭೆಗಳ ಮೂಲಕ ಕೊಡಬೇಕೆನ್ನುವಂಥದ್ದು ನಿಜ. ಆದರೆ, ಬಡವರಿಗೆ ಸಿಗಬೇಕಾದಂಥ ಮನೆಗಳು ಇವತ್ತು ಎಲ್ಲಾ ಬೇರೆ ಬೇರೆಯವರ ಪಾಲಾಗುತ್ತಿದೆ. ಇದರ ಬಗ್ಗೆ ಮಾನ್ಯ ಸಚಿವರು ಬಹಳ ಗಂಭೀರವಾಗಿ

ತೆಗೆದುಕೊಳ್ಳಬೇಕು. ನಮ್ಮ ಭಾಗದಲ್ಲಿ ಯಾವುದೇ ಬಡವರಿಗೆ ಮನೆ ಸಿಗುತ್ತಿಲ್ಲ. ಈ ಗ್ರಾಮಸಭೆಗೆ ಅವರು ಹೋಗಿ ಮಾತನಾಡುವುದಕ್ಕೆ ಇಷ್ಟಪಟ್ಟರೂ ಗ್ರಾಮಪಂಚಾಯಿತಿಯವರು ಬಿಡುವುದಿಲ್ಲ. ಇದು ಬಹಳ ಗಂಭೀರವಾದ ಸಮಸ್ಯೆ. ಮಾನ್ಯ ವಸತಿ ಸಚಿವರಲ್ಲಿ ವಿನಂತಿಸುವುದೇನೆಂದರೆ, ಇದರ ಬಗ್ಗೆ ಆಲೋಚನೆ ಮಾಡಿ. ನಮ್ಮಲ್ಲಿ ಏನೆಂದರೆ, ಸರ್ವೆ ಕುಟುಂಬ ಸಮೀಕ್ಷೆಯನ್ನು ಮಾಡಿ ಅಲ್ಲಿ ಯಾರು ಬಡವರಿದ್ದಾರೆ ಆ ಪಟ್ಟಿಯಲ್ಲಿರತಕ್ಕಂಥವರಿಗೇ ಆ ಮನೆಗಳನ್ನು ಕೊಟ್ಟರೆ ಆ ಬಡವರಿಗೆ ಆ ಮನೆ ಮುಟ್ಟಬಹುದೆಂದು ನನ್ನ ಅಭಿಪ್ರಾಯ. ಇನ್ನು ಈ PDO ಗಳಿಗೆ ಯಾವುದೇ accountability ಇಲ್ಲ. ಮನೆಗಳನ್ನು ಯಾರಿಗೆ ಕೊಡಬೇಕೆಂಬ ಬಗ್ಗೆ ಪಂಚಾಯತಿ ಅಧ್ಯಕ್ಷರು, ಅವರೆಲ್ಲ ಸೇರಿ ಪಟ್ಟಿ ಮಾಡುತ್ತಾರೆ. ಅವರು ಯಾವುದು ಹೇಳಿರುತ್ತಾರೋ, ಅದಕ್ಕೆ sign ಮಾಡಿ ಕಳುಹಿಸುತ್ತಾರೆ. ಆ PDO ಗಳಿಗೆ ಯಾವ accountability ಇದೆ? ಬಡವರಿಗೆ ಮನೆ ಇಲ್ಲ ಎಂದು ನಾವು ಕೇಳುತ್ತೇವೆ. ಅದನ್ನು accountability ಮಾಡಿ. ಯಾರು ಬಡವರಿಗೆ ಮನೆ ಮುಟ್ಟಿಸುವಂಥ ಕೆಲಸ ಮಾಡುವುದಿಲ್ಲವೋ ಅಂಥ PDO ಗಳ ಮೇಲೆ ಕ್ರಮ ಜರುಗಿಸಿದರೆ ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸವಾಗುತ್ತದೆ. ಆದರೆ ನಡೆಯುತ್ತಿಲ್ಲ. ಅವರಿಗೆ ಯಾವುದೇ accountability ಇಲ್ಲ. ಮನೆಗಳನ್ನು ಕಟ್ಟುತ್ತಾರೆ, ಆ ಫಲಾನುಭವಿಗಳ ಒಂದೇ photo ಅನ್ನು ಅಲ್ಲಿ ಎದುರುಗಡೆ ನಿಲ್ಲಿಸಿ ಆ photo ತೆಗೆಯುವಂಥದ್ದು. ಅದರ ಬದಲು ಆ ಮನೆ ಫಲಾನುಭವಿಗಳು ಮತ್ತು PDO ಇಬ್ಬರೂ ಸಹಿತ ಆ ಮನೆ ಎದುರುಗಡೆ ನಿಂತು photo ತೆಗೆಯುವಂಥದ್ದು ಆಗಬೇಕು. ಅಂದರೆ, ಅಲ್ಲಿ ಒಂದು ಚೂರು ಅವರಿಗೆ ಹೆದರಿಕೆಯಾಗುತ್ತದೆ. ಎದುರುಗಡೆ ನಾವು ನಿಂತುಕೊಂಡು photo ತೆಗೆದರೆ ನಮಗೂ ಜವಾಬ್ದಾರಿ ಇದೆ, ಅಲ್ಲಿ ಮನೆ ಕಟ್ಟಿದ್ದಾರೆ ಎನ್ನುವಂಥದ್ದು ನಿಜ ಆಗುತ್ತದೆ. ನನ್ನ ಕ್ಷೇತ್ರದಲ್ಲಿ ನಡೆದಿರುವಂಥ ಸಾಕಷ್ಟು ಉದಾಹರಣೆ ಇದೆ. ಈಗ ಗೋಗಿಕೋನ ಮತ್ತು ಗೋಗಿಪ್ಲೇಟ ಈ ಎರಡು ಗ್ರಾಮ ಪಂಚಾಯತಿಗಳಲ್ಲಿ ರಾಜೀವ ಗಾಂಧಿ ವಸತಿ ನಿಗಮಕ್ಕೆ ಸಂಬಂಧಿಸಿದ್ದು ನನ್ನ ಹತ್ತಿರ ಉದಾಹರಣೆ ಇದೆ. ಅವರೇ ಒಂದು report ಕೊಟ್ಟಿದ್ದಾರೆ. 526 ಮನೆಗಳು digital mixing ಮಾಡಿ ಯಾವುದೇ

ದಾಖಲಾತಿ ಇರಲಾರದ ಹಾಗೆ ಹಣವನ್ನೆಲ್ಲ ದೋಚಿಕೊಂಡು ಹೋಗಿದ್ದಾರೆ. ಅದಕ್ಕೆ ಯಾವುದೇ ದಾಖಲೆಗಳಿಲ್ಲ. ಆ ಸಂಬಂಧ ಸುಮಾರು 12 ಜನ EO ಗಳ ಮೇಲೆ criminal case ಆಯಿತು. ಆದರೂ ಕಡೆಗೆ ಏನೂ ಆಗಲಿಲ್ಲ. ನಾನು ಇಲ್ಲಿ ಒಂದು register ತೆಗೆದುಕೊಂಡು ಬಂದಿದ್ದೇನೆ. ನಮ್ಮಲ್ಲಿ ಕರಡಕಲ್ ಎನ್ನುವ ಪಂಚಾಯತಿ ಬರುತ್ತದೆ. ಆ ಕರಡಕಲ್ ಎನ್ನುವ ಪಂಚಾಯತಿಯಿಲ್ಲಿ ಆ register ನಲ್ಲಿ ಕೇವಲ ಹಣ ಖರ್ಚಾಗಿರುವುದನ್ನು ಬರೆದಿದ್ದಾರೆಯೇ ಹೊರತು ಯಾರಿಗೆ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಯಾವ ಹೆಸರೂ ಇಲ್ಲ. ನಮ್ಮಲ್ಲಿ ಯಾರದ್ದು ಇದರಲ್ಲಿ ಸಹಿ ಮಾಡಿಲ್ಲ ಅದರೆ ಬರೀ ಖರ್ಚುಗಳನ್ನು ಮಾತ್ರ ತೋರಿಸಿದ್ದಾರೆ, ಆ ಫಲಾನುಭವಿಗಳ ಹೆಸರುಗಳು ಇಲ್ಲ.

ಉಪಾಧ್ಯಕ್ಷರು:– ಅದನ್ನು ಕಳುಹಿಸಿ ಕೊಡಿ ಮಾನ್ಯ ಮಂತ್ರಿಗಳ ಹತ್ತಿರ ಮಾತನಾಡಿ.

ಶ್ರೀ ಗುರು ಪಾಟೀಲ್ ಶಿರವಾಳ:– ನಮ್ಮಲ್ಲಿ ಇಂಥ ಅವ್ಯವಸ್ಥೆ ಇದೆ. ಈ ಪಂಚಾಯಿತಿಯಲ್ಲಿ IAY ಮತ್ತು ಬಸವ ಶ್ರೀ ಯೋಜನೆಯಲ್ಲಿ ಮನೆಗಳನ್ನು ಪಟ್ಟಿ ಮಾಡಿ ಕಳುಹಿಸಿದ್ದಾರೆ. ಊರಿನವರು, ಇಲ್ಲಿ ಯಾವುದೇ ಗ್ರಾಮ ಸಭೆ ನಡೆದಿಲ್ಲ, ನೀವು ಶಾಸಕರಾಗಿ ಏನು ಮಾಡುತ್ತಿದ್ದೀರಿ? ನಿಮಗೇನು ಅಧಿಕಾರ ಇಲ್ಲವೆ ಎಂದು ಕೇಳುತ್ತಿದ್ದಾರೆ. ಇದಕ್ಕೆ ನಾವೇನು ಉತ್ತರ ಕೊಡಬೇಕು. ದಯಮಾಡಿ ಇದರ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕು. ನಾವು ಹೇಳಿದಂಥವರಿಗೆ ಮನೆಗಳನ್ನು ಕೊಡುವುದು ಬೇಡ. ಬಡವರಿಗೆ ಮನೆ ಕೊಡುವ ಕೆಲಸ ಆಗಬೇಕು. ಈ ಯೋಜನೆ ಸರಿಯಾಗಿ ನಡೆಯಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ನಮ್ಮ ಮಿತ್ರರಾದ ಬಣಕಾರ್‌ರವರು ಮಾತನಾಡುವಾಗ, ಈ PDO ಮತ್ತು nodal officers ಈ ಮನೆಗಳ ವಿಷಯದಲ್ಲಿ photo ತೆಗೆದು GPS ಮಾಡುವಾಗ ಅವರು ದುಡ್ಡು ಕೊಟ್ಟರೆ ಮಾತ್ರ ಅಲ್ಲಿಗೆ ಹೋಗಿ GPS ಮಾಡುವುದು. ಯಾರು ದುಡ್ಡು ಕೊಡುವದಿಲ್ಲವೋ ಅಂಥವರದ್ದು ಇವರು GPS ಮಾಡುವುದಿಲ್ಲ. ಅಷ್ಟೊತ್ತಿಗೆ ಮೂರು ತಿಂಗಳು ಮುಗಿದು ಹೋಗಿರುತ್ತದೆ. GPS ಮಾಡುವುದಕ್ಕೆ ಇವರಿಗೆ

ಟೈಂ ಇರುವುದು 90 ದಿವಸಗಳು. ಅಷ್ಟರೊಳಗೆ ಯಾವುದು GPS ಮಾಡುವುದಿಲ್ಲ ಅದು laps ಆಯಿತು ಅದಕ್ಕೆ ದುಡ್ಡು ಬಂದಿಲ್ಲವೆನ್ನುತ್ತಾರೆ. ಇಂಥದ್ದು ಬಹಳ ನಡೆಯುತ್ತಿದೆ. ಇದಕ್ಕೆ ಬಹಳ ಕಟ್ಟು ನಿಟ್ಟಿನ ಕ್ರಮ ಆಗಬೇಕು. ಯಾವುದೇ ಬಡವರಿಂದ ದುಡ್ಡು ತೆಗೆದುಕೊಳ್ಳುವುದಾಗಲಿ ಮತ್ತೊಂದಾಗಲಿ ಇದೆಲ್ಲಾ ನಿಲ್ಲಬೇಕೆನ್ನುವುದು ನನ್ನ ಒತ್ತಾಯ. ಅದೇರೀತಿಯಾಗಿ, ನಗಾರಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ, ಪುರಸಭೆಯ ವ್ಯಾಪ್ತಿಯಲ್ಲಿ ಯಾವ ರೀತಿಯ ಸಮಸ್ಯೆ ಇದೆ ಎಂದರೆ, ಬೆಂಗಳೂರಿನಲ್ಲಿ ತಾವೇನು ಕಸ ವಿಲೇವಾರಿ ಸಮಸ್ಯೆ ಎದುರಿಸುತ್ತಿದ್ದೀರಿ, ನಮ್ಮಲ್ಲಿ ಕಸವನ್ನೇ ತೆಗೆಯುವುದಿಲ್ಲ. ಎಲ್ಲಾ ward ಗಳಲ್ಲಿರುವ ಚರಂಡಿಗಳು full ಆಗಿ ಹೂಳುತುಂಬಿಕೊಂಡು ನಿಂತುಕೊಂಡಿರುತ್ತವೆ. ಅದನ್ನು ಒಂದು ದಿವಸವೂ ತೆಗೆಯುವುದಿಲ್ಲ. ಕಸ ಯಾರು ಗುಡಿಸುತ್ತಾರೆನ್ನುವುದು ಗೊತ್ತಿಲ್ಲ. ನನ್ನ ಶಹಾಪುರ ಪಟ್ಟಣದಲ್ಲಿ ಸುಮಾರು 55 ಸಾವಿರ ಜನಸಂಖ್ಯೆ ಇದೆ. ಇಲ್ಲಿ ಕೇವಲ 22 ಜನ ಕಸ ವಿಲೇವಾರಿ ಮಾಡುವವರು ಇದ್ದಾರೆ. ಅದು ಹೇಗೆ ಸಾಧ್ಯ? ನಾನು ಹಲವಾರು ಅಧಿಕಾರಿಗಳ ಗಮನಕ್ಕೂ ತಂದೆ. ಏನೂ ಕೆಲಸವಾಗಲಿಲ್ಲ. ಪಟ್ಟಣ ಪ್ರದೇಶಗಳು ಯಾವ ರೀತಿ ಎಂದರೆ drastic ರೀತಿಯಲ್ಲಿ ಇವತ್ತು ಇದ್ದಿದ್ದು ನಾಳೆ ಇರುವುದಿಲ್ಲ. ಬೆಂಗಳೂರು ಯಾವ ರೀತಿಯಲ್ಲಿ ಬೆಳವಣಿಗೆಯಾಗಿದೆ, revenue land ಬಗ್ಗೆ ಎಲ್ಲಾ ಕಡೆ ಸಮಸ್ಯೆಯಿದೆ. ಪಟ್ಟಣದ ಅಕ್ಕ ಪಕ್ಕದಲ್ಲಿ ಬರುವ ಪಂಚಾಯಿತಿಗಳು by number ಕೊಟ್ಟು ಅವೆಲ್ಲಾ green belt lands, ಅದು actually ಪಟ್ಟಣ ಪ್ರದೇಶಗಳಲ್ಲಿ ಬರುವುದಿಲ್ಲ, ಹಳ್ಳಿ ಪ್ರದೇಶದಲ್ಲಿ ಬರುತ್ತವೆ ಅವಕ್ಕೆಲ್ಲಾ ಗ್ರಾಮ ಪಂಚಾಯಿತಿಯವರು by number ಕೊಟ್ಟು ಅಲ್ಲಿ ಮನೆ ಕಟ್ಟಲಿಕ್ಕೆ permission ಕೊಡುತ್ತಾರೆ. ನಂತರ ನಮ್ಮ ಹತ್ತಿರ ಬಂದು ಅಲ್ಲಿ develop ಮಾಡಿ ಎಂದು ಕೇಳುತ್ತಾರೆ. ನಾವು ಎಲ್ಲಿಂದ ಅಲ್ಲಿಗೆ ದುಡ್ಡು ಕೊಡಬೇಕು? ದಯಮಾಡಿ ಇಂಥವನ್ನೆಲ್ಲಾ ನಿಲ್ಲಿಸಬೇಕು. ಮಾನ್ಯ ನಗಾರಾಭಿವೃದ್ಧಿ ಸಚಿವರನ್ನು ಕೇಳಬಯಸುತ್ತೇನೆ. ನಮ್ಮ ಪುರಸಭೆಯ ವ್ಯಾಪ್ತಿಯಲ್ಲಿ, UGD scheme ಮತ್ತು ಶಹಾಪುರ ಪಟ್ಟಣಕ್ಕೆ ಶಾಶ್ವತವಾಗಿ ಕುಡಿಯುವ ನೀರಿನ ಯೋಜನೆಗೆ

ಈಗಾಗಲೇ DPR submit ಆಗಿದೆ. ದಯಮಾಡಿ ತಾವು ಆ ಎರಡನ್ನು sanction ಮಾಡಿ ಕೊಡಬೇಕೆಂದು ಒತ್ತಾಯಿಸಿ, ಈ ವಿಷಯದ ಮೇಲೆ ಚರ್ಚೆ ಮಾಡುವುದಕ್ಕೆ ನನಗೆ ಅನುವು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ರಾಜು ಅಲಗೂರು (ನಾಗಠಾಣ):– ಮಾನ್ಯ ಉಪಾಧ್ಯಕ್ಷರೆ, ತಾವು ಸಮಾಜ ಕಲ್ಯಾಣ ಇಲಾಖಾ ಬೇಡಿಕೆಗಳ ಮೇಲೆ ಮಾತನಾಡಲಿಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಮೊದಲಿಗೆ ಅಭಿನಂದಿಸುತ್ತೇನೆ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ಸಮಾಜ ಕಲ್ಯಾಣ ಮಂತ್ರಿಗಳಿಗೂ ಕೂಡ ನಾನು ಅಭಿನಂದಿಸುತ್ತೇನೆ. ಕಾರಣ, ಕರ್ನಾಟಕದ ಅನುಸೂಚಿತ ಜಾತಿ ಮತ್ತು ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ವಿಧೇಯಕ, 2013ರ ಪ್ರಕಾರ ರಾಜ್ಯದ ಯೋಜನಾ ವೆಚ್ಚದ ಒಂದು ಭಾಗವನ್ನು ಈ ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭಿವೃದ್ಧಿಗೆ ಮೀಸಲಿಡುವುದಕ್ಕಾಗಿ ಒಂದು ಕಾನೂನನ್ನು ಮಾಡಿದ್ದಕ್ಕೆ ಜೊತೆಗೆ ಆ ಮೀಸಲಿಟ್ಟ ಹಣವನ್ನು ಸದುಪಯೋಗವಾಗಿ ಸರಿಯಾದ ಕಾರ್ಯಕ್ರಮಗಳು ಸರಿಯಾದ ರೀತಿಯಲ್ಲಿ ನಡೆಯಬೇಕೆನ್ನುವ ದೃಷ್ಟಿಯಕೋನದಲ್ಲಿ ಅದರ ಮೇಲ್ವಿಚಾರಣೆ ಮಾಡಲಿಕ್ಕಾಗಿಯೇ ಒಂದು ಅಭಿವೃದ್ಧಿ ಪರಿಷತ್ತನ್ನು ಕೂಡ ಮಾಡಿದ್ದಾರೆ. ಆ ಕಾರಣಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. RTE ವ್ಯವಸ್ಥೆ ಬಂದ ಮೇಲೆ SC/ST ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳ ಶಾಲೆಗಳಲ್ಲಿ ಶಿಕ್ಷಣ ಕಲಿಯತಕ್ಕಂಥ ಅವಕಾಶ ಒದಗಿದೆ. ಆ ವ್ಯವಸ್ಥೆ ಬಂದರೂ ಕೂಡ ಏನಾಗಿದೆ ಎಂದರೆ, admission ಮಾಡತಕ್ಕಂಥ ಸಂದರ್ಭದಲ್ಲಿ ಸರ್ಕಾರ ಕೇವಲ 75% ಅವರ feeನ್ನು ಭರಿಸುತ್ತಿದೆ. ಆದರೆ, ಆ ಶಿಕ್ಷಣ ಸಂಸ್ಥೆಗಳು ನಿಗದಿಪಡಿಸಿರುವ fee ಏನಿದೆ ಸಂಪೂರ್ಣವಾದ fee ಇವರು ಕೊಡುವುದಿಲ್ಲವೆಂದು ಬಹುತೇಕವಾಗಿ ಅರ್ಹ ವಿದ್ಯಾರ್ಥಿಗಳಿಗೆ admission ಕೊಡುವುದಕ್ಕೆ ಕೆಲವು ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳು ನಿರಾಕರಿಸುತ್ತಿವೆ. ಹೀಗಾಗಿ ಅಂಥ ಮಕ್ಕಳು ಒಳ್ಳೆಯ ಸಂಸ್ಥೆಯಲ್ಲಿ ಕಲಿಯತಕ್ಕಂಥ ಅವಕಾಶದಿಂದ ವಂಚಿತರಾಗುತ್ತಿದ್ದಾರೆ. ನಾನು ಏನು ಹೇಳುತ್ತೇನೆಂದರೆ, ಆ ಶಿಕ್ಷಣ ಸಂಸ್ಥೆಗಳು fee ಎನು ನಿಗದಿಪಡಿಸಿವೆ ಆ ಎಲ್ಲಾ

fee ಯನ್ನು ಸರ್ಕಾರ ಭರಿಸಬೇಕೆಂದು ತಮ್ಮ ಮೂಲಕ ಸಂಬಂಧಪಟ್ಟ ಇಲಾಖಾ ಮಂತ್ರಿಗಳಿಗೆ ಮನವಿ ಮಾಡಲಿಚ್ಛಿಸುತ್ತೇನೆ. SC/ST ವಿದ್ಯಾರ್ಥಿಗಳಿಗೆ income limit ಮಾಡಿದಿರಿ ಅದನ್ನು ಸಡಿಲಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ. ವೈದ್ಯಕೀಯ ಶಿಕ್ಷಣಕ್ಕೆ ಹೋಗಬೇಕಾದರೆ, ಇಂಜಿನಿಯರಿಂಗ್‌ಗೆ ಹೋಗಬೇಕಾದರೆ, ವಿದ್ಯಾರ್ಥಿಗಳ ತಂದೆ peon ಇದ್ದರೂ ಕೂಡ ಅವನ ವಾರ್ಷಿಕ ಸಂಬಳ ಎರಡೂವರೆಯಿಂದ ಮೂರು ಲಕ್ಷದ ವರೆಗೆ ಇರುತ್ತದೆ. ಈ income limit ಸ್ವಲ್ಪ ಅಡತಡೆಯಾಗುತ್ತಿದೆ. ಅದಕ್ಕಾಗಿ ಇದನ್ನು ಸಡಿಲಗೊಳಿಸಿ income limit ಹೆಚ್ಚು ಮಾಡಿದರೆ ಕನಿಷ್ಠ ಸಾಮಾನ್ಯ ವ್ಯಕ್ತಿಯ ಪರಿಶಿಷ್ಟ ಜಾತಿ/ಪಂಗಡದ ಮಕ್ಕಳು ಕೂಡ ಶಿಕ್ಷಣ ಪಡೆಯುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ವಿಚಾರ ಹೇಳುವುದಕ್ಕೆ ನಾನು ಬಯಸುತ್ತೇನೆ. ಒಂದು ದುರ್ದೈವದ ಸಂಗತಿ ಏನೆಂದರೆ, RTE ನಲ್ಲಿ ಸೌಲಭ್ಯ ಪಡೆದಿರುವ ಮಕ್ಕಳಿಗೆ ಕೆಲವು ಶಿಕ್ಷಣ ಸಂಸ್ಥೆಗಳು admission ಕೊಟ್ಟರೂ ಕೂಡ ಅವರನ್ನು ಪ್ರತ್ಯೇಕವಾದ ಕೋಣೆಯಲ್ಲಿ ಕೂಡಿಸಿ ಕಲಿಸತಕ್ಕಂಥ ಘಟನೆ ಕೂಡ ಸರ್ಕಾರದ ಗಮನಕ್ಕೆ ಬಂದಿರಬಹುದು. ದಾವಣಗೆರೆ ಜಿಲ್ಲೆಯ ವ್ಯಾಪ್ತಿಯಲ್ಲಿ ಈ ರೀತಿಯಾಗಿ ನಡೆಯುತ್ತಿದೆ ಎಂದು TV ಯಲ್ಲಿ ನೋಡಿದ್ದೇವೆ. ಆ ರೀತಿ ತಾರತಮ್ಯ ಮಾಡಿದಂಥ ಶಿಕ್ಷಣ ಸಂಸ್ಥೆಗಳ ಮಾನ್ಯತೆ ರದ್ದು ಮಾಡತಕ್ಕಂಥ ಶಿಫಾರಸ್ಸು ಮಾಡಬೇಕಾಗುತ್ತದೆ. ಯಾವ ಶಿಕ್ಷಣ ಸಂಸ್ಥೆಗಳು RTE ವ್ಯವಸ್ಥೆಯಲ್ಲಿ admission ಪಡೆದಂಥ ಮಕ್ಕಳಿಗೆ ಸಮಾನವಾದ ಶಿಕ್ಷಣ ಕೊಡಲಿಕ್ಕೆ ನಿರಾಕರಣೆ ಮಾಡಿರತಕ್ಕಂಥ ಶಿಕ್ಷಣ ಸಂಸ್ಥೆಗಳು ಎಷ್ಟೇ ಪ್ರತಿಷ್ಠಿತರಿದ್ದರೂ ಕೂಡ ಅಂಥ ಶಿಕ್ಷಣ ಸಂಸ್ಥೆಗಳ ಮಾನ್ಯತೆ ರದ್ದು ಮಾಡುವ ಕಾನೂನನ್ನು ತರಬೇಕಾಗುತ್ತದೆ ಎಂದು ತಮ್ಮ ಮೂಲಕ ನಾನು ವಿನಂತಿ ಮಾಡಿಕೊಳ್ಳುವುದಕ್ಕೆ ಬಯಸುತ್ತಿದ್ದೇನೆ. ಕಿತ್ತೂರು ರಾಣಿ ಚೆನ್ನಮ್ಮ ವಸತಿ ವಿದ್ಯಾರ್ಥಿ ನಿಲಯಗಳಲ್ಲಿ ಇಂದು ಏನಾಗಿದೆ ಎಂದರೆ, ಅಲ್ಲಿ ಪರಿಶಿಷ್ಟ ಜಾತಿ ಪಂಗಡದ ವಿದ್ಯಾರ್ಥಿನಿಯರು ಹೆಚ್ಚಾಗಿ ಆ ಶಿಕ್ಷಣ ಸಂಸ್ಥೆಯಲ್ಲಿ ಪ್ರೌಢಾವಸ್ಥೆಯಲ್ಲಿ ಬಂದಿರುವ ವಿದ್ಯಾರ್ಥಿನಿಯರು ಆ ವಸತಿ ವಿದ್ಯಾರ್ಥಿನಿಲಯಗಳಲ್ಲಿ ಕಲಿಯತಿರುತ್ತಾರೆ. ಅವರಿಗೆ ನರ್ಸಗಳ ವ್ಯವಸ್ಥೆಯಾಗಲಿ, ವೈದ್ಯಕೀಯ

ವ್ಯವಸ್ಥೆಯಾಗಲಿ, ಇಲ್ಲ. ಈ ಶುಶ್ರೂಷೆ ಜೊತೆಗೆ ಅವರ ಭದ್ರತೆ ಕೊರತೆ ಕೂಡ ಅಲ್ಲಿ ಕಾಣುತ್ತಿದೆ. ಊರಿನಿಂದ ದೂರದಲ್ಲಿ ಆ ಹಾಸ್ಟೆಲ್‌ಗಳಿರುತ್ತವೆ. ಅಲ್ಲಿ ಯಾವುದೇ ರೀತಿಯ ಭದ್ರತೆ ವ್ಯವಸ್ಥೆಯಾಗಲಿ, ಪೊಲೀಸ್ ವ್ಯವಸ್ಥೆಯಾಗಲಿ, ಯಾವುದೂ ಕೂಡ ಇರುವುದಿಲ್ಲ. ಇಂಥ ಭಯಾನಕವಾದ ಪರಿಸ್ಥಿತಿಯಲ್ಲಿ ಆ ಹೆಣ್ಣುಮಕ್ಕಳು ಆ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಜನೆ ಮಾಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಎಲ್ಲೆಲ್ಲಿ ಆ ತರಹದ ಶಿಕ್ಷಣ ಸಂಸ್ಥೆಗಳಿವೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಇರಬಹುದು, ಮೊರಾರ್ಜಿ ದೇಸಾಯಿ ವಸತಿ ಶಾಲೆ ಇರಬಹುದು, ಎಲ್ಲಾ ಕಡೆ ವಿದ್ಯಾರ್ಥಿನಿಯರ ಭದ್ರತೆಯ ದೃಷ್ಟಿಯಿಂದ ಪೊಲೀಸ್‌ರನ್ನು ನೇಮಿಸತಕ್ಕಂಥದ್ದನ್ನು ಅಥವಾ ಭದ್ರತೆಗೆ ಏನಾದರೂ ಬದಲಿ ವ್ಯವಸ್ಥೆ ಮಾಡುವುದನ್ನೂ ಕೂಡ ಸರ್ಕಾರ ಚಿಂತನೆ ಮಾಡಬೇಕೆನ್ನುವ ವಿಚಾರವನ್ನು ತಮ್ಮ ಮೂಲಕ ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇದರ ಜೊತೆಗೆ ಬಾಡಿಗೆ ಕಟ್ಟಡಗಳಲ್ಲಿ ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಲಭ್ಯದ ಕೊರತೆ ಇದೆ. ಹೀಗಾಗಿ ಸುಸಜ್ಜಿತವಾಗಿರತಕ್ಕಂಥ ಹಾಸ್ಟೆಲ್‌ಗಳನ್ನು ನಿರ್ಮಿಸಿ ಯಾವುದೇ ಪರಿಸ್ಥಿತಿಯಲ್ಲಿ ಆ ಮಕ್ಕಳಿಗೆ ವ್ಯವಸ್ಥಿತವಾದ ಶಿಕ್ಷಣ ಕೊಡಬೇಕಾದಂಥ ಹೊಣೆಗಾರಿಕೆ ಸರ್ಕಾರಕ್ಕೆ ಇರುವುದರಿಂದ ಆ ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುತ್ತೇನೆ. ಇವತ್ತಿನದಿವಸ ನಾವು ಅನೇಕ ಕಡೆ ಹಾಸ್ಟಲ್‌ಗಳನ್ನು ನೋಡಿದ್ದೇವೆ. ಅಲ್ಲಿ ನೀರು, ವಿದ್ಯುತ್ ವ್ಯವಸ್ಥೆ ಇಲ್ಲ ಹಾಗೆಯೇ ಅಲ್ಲಿನ ಅಡುಗೆ ಕೋಣೆ ನೋಡಿದರೆ ಇವತ್ತು ಮನುಷ್ಯರು ಅಲ್ಲಿ ಊಟ ಮಾಡತಕ್ಕಂಥ ಪರಿಸ್ಥಿತಿ ಇಲ್ಲ. ಇಂಥ ಒಂದು ಅಡುಗೆ ಕೋಣೆಗಳು ಇವತ್ತು ಹಾಸ್ಟಲ್‌ಗಳಲ್ಲಿವೆ. ಆದ್ದರಿಂದ, ಈ ಒಂದು ಸಮಸ್ಯೆಗಳನ್ನು ಬಗೆಹರಿಸುವುದಕ್ಕೋಸ್ಕರ ಇದಕ್ಕೊಂದು ವ್ಯವಸ್ಥಿತವಾಗಿರತಕ್ಕಂಥ ನಿಯಮಗಳನ್ನು ಜಾರಿಗೆ ತರಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತೊಂದು ವಿಷಯ ಏನೆಂದರೆ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರಿಗೆ ಸರ್ಕಾರಿ ಗುತ್ತಿಗೆಯಲ್ಲಿ ಮತ್ತು purchaseಗಳಲ್ಲಿ ಮೀಸಲಾತಿ ತರುತ್ತೇವೆಂದು PWD ಇಲಾಖೆ ಮಿನಿಸ್ಟರ್ ಆಗಿರುವ ಸನ್ಮಾನ್ಯ

ಮಹದೇವಪ್ಪನವರು ಘೋಷಣೆ ಮಾಡಿದ್ದರು. ತಮ್ಮ ಮುಖಾಂತರ ಅವರಿಗೆ ಮತ್ತು ಸಂಬಂಧಪಟ್ಟ ಎಲ್ಲರಿಗೂ ಸಹ ನಾನು ಕೇಳುವುದಕ್ಕೆ ಬಯಸುವುದೇನೆಂದರೆ, ಇಲ್ಲಿಯವರೆಗೆ ಕೂಡ ಯಾವುದೇ ಇಲಾಖೆಯ ಗುತ್ತಿಗೆಯಲ್ಲಿ ಮತ್ತು purchase ನಲ್ಲಿ ಕೂಡ ಈ ಸರ್ಕಾರದ ಆಜ್ಞೆ ಪಾಲನೆ ಆಗಿಲ್ಲ. ಆಜ್ಞೆಯನ್ನು ಪಾಲನೆ ಮಾಡದೇ ಇರುವಂಥ ಅಧಿಕಾರಿಗಳ ಮೇಲೆ ಯಾವ ರೀತಿಯಾದಂಥ ಕ್ರಮವನ್ನು ತಾವು ಜರುಗಿಸುತ್ತೀರೆಂಬ ವಿಷಯವನ್ನು ಇಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ಬಹುಶಃ ಇದು ಈಗಾಗಲೇ ಆಗಬೇಕಾಗಿತ್ತು. ಯು.ಕೆ.ಪಿ. ಇರಬಹುದು, PWD ಅಥವಾ ಬೇರೆ ಬೇರೆ ಇಲಾಖೆಗಳಾಗಿರಬಹುದು, ಎಲ್ಲಿಯೂ ಕೂಡ ಗುತ್ತಿಗೆಯಲ್ಲಿ ಮೀಸಲಾತಿಯನ್ನು ಇಲ್ಲಿಯವರಿಗೆ ಅನ್ವಯ ಮಾಡಿಲ್ಲ. ಆದ್ದರಿಂದ, ಈ ಬಗ್ಗೆ ಒಂದು ಕಟ್ಟುನಿಟ್ಟಿನ ತೀರ್ಮಾನವನ್ನು ಸರ್ಕಾರ ಮಾಡಬೇಕಾಗುತ್ತದೆ. ಯಾವ ಗುತ್ತಿಗೆಯಾಗಲಿ ಅಥವಾ purchase ಆಗಲಿ, ಪ್ರತಿಶತ 18 ಅಥವಾ 21% ಪ್ರಕಾರ ಕಾಮಗಾರಿಗಳಲ್ಲಿ ಮೀಸಲಾತಿಯ ಅನ್ವಯ ನಾವು ಕೊಡುತ್ತೇವೆಂಬ ಬಗ್ಗೆ ಸರ್ಕಾರ ಒಂದು ಗಂಭೀರವಾದಂಥ ಚಿಂತನೆಯನ್ನು ಮಾಡಬೇಕು. ಈಗಾಗಲೇ ಇದರ ಬಗ್ಗೆ ತಾವು ಏನು ಆಲೋಚನೆ ಮಾಡಿದ್ದೀರೋ ಅದರ ಬಗ್ಗೆ ಮರು ಆಲೋಚನೆ ಮಾಡಬೇಕೆಂಬ ಒಂದು ವಿನಂತಿಯನ್ನು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ. ನನ್ನದೊಂದು ಸಲಹೆ ಏನೆಂದರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳನ್ನು ತಾವು ಮಾಡಿದ್ದೀರಿ. ಅದರ ಜೊತೆಗೆ ಎಲ್ಲಾ ಜಾತಿಯ ಮಕ್ಕಳು ಅಂದರೆ, ಹಿಂದುಳಿದ ವರ್ಗದ ಜಾತಿ ಮಕ್ಕಳು ಮತ್ತು ಮುಂದುವರಿದಂಥ ವರ್ಗದ ಜಾತಿ ಮಕ್ಕಳು ಮತ್ತು ಪರಿಶಿಷ್ಟ ವರ್ಗದ ಜಾತಿ ಮಕ್ಕಳು ಈ ರೀತಿಯಾಗಿ ಎಲ್ಲ ಮಕ್ಕಳು ಕೂಡ ಒಂದೇ ಕಡೆ ಕಲಿಯತಕ್ಕಂಥ ಒಂದು ಹಾಸ್ಟಲ್ ಅನ್ನು ನಿರ್ಮಾಣ ಮಾಡಿ ಒಂದು ಜಾತಿಯತೆ ಎಂಬ ಕಲ್ಪನೆ ಏನಿದೆ ಅದು ಪ್ರಾರಂಭದಲ್ಲಿಯೇ ಹೋಗತಕ್ಕಂಥ ಒಂದು ವ್ಯವಸ್ಥೆಗೆ ತಾವು ಏಕೆ ಮುಂದಾಗಬಾರದು ಎಂಬ ಒಂದು ಸಲಹೆಯನ್ನು ತಮ್ಮ ಮುಖಾಂತರ ಸರ್ಕಾರಕ್ಕೆ ಕೊಡುವುದಕ್ಕೆ ಬಯಸುತ್ತಿದ್ದಾನೆ. ಏಕೆಂದರೆ, ಈ ರೀತಿಯಾದ ವ್ಯವಸ್ಥೆ ಎಲ್ಲಿಯೂ ಕೂಡ

ಇಲ್ಲ. ಇವತ್ತು ಸಾಮಾಜಿಕ ನ್ಯಾಯ, ಸಾಮಾಜಿಕ ಬದ್ಧತೆ, ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವಂಥ ಈ ಸರ್ಕಾರ ಆ ಒಂದು ಚಿಂತನೆಯನ್ನು ಏಕೆ ಮಾಡಬಾರದು ಎಂಬ ವಿಚಾರವನ್ನು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಹೇಳಿಲಿಕ್ಕೆ ಬಯಸುತ್ತಿದ್ದೇನೆ. ಇವತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ತಾವು ಗುತ್ತಿಗೆಯನ್ನು ಕೊಡುವುದಾದರೆ ಬಹುಶಃ ಒಂದು ನಿಯಮವನ್ನು ಸಡಿಲಗೊಳಿಸಬೇಕಾಗುತ್ತದೆ. ಗುತ್ತಿಗೆಯನ್ನು ಪಡೆಯತಕ್ಕಂಥ ಸಂದರ್ಭದಲ್ಲಿ EMD, Security Deposit ಆಗಿರಬಹುದು, ಇವುಗಳನ್ನು ಸರ್ಕಾರ ಮನ್ನಾ ಮಾಡತಕ್ಕಂಥ ಒಂದು ನಿಟ್ಟಿನಲ್ಲಿ ಯೋಚನೆ ಮಾಡಬೇಕೆಂಬ ವಿಚಾರವನ್ನು ಹೇಳುತ್ತೇನೆ. ಇವತ್ತು ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರಿಗೆ ಒಂದು ಉದ್ಯೋಗವನ್ನು ಕೊಟ್ಟು ಅವರು ಆರ್ಥಿಕ ಅಭಿವೃದ್ಧಿ ಆಗಬೇಕೆಂಬ ಉದ್ದೇಶದ ಹಿನ್ನೆಲೆಯಲ್ಲಿ ಅವರಿಗೆ ಈಗ Karnataka State Finance corporation (KSFC)ನಲ್ಲಿ 4% ಬಡ್ಡಿ ಸಾಲವನ್ನು 2 ಕೋಟಿ ರೂಪಾಯಿವರೆಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿದ್ದೀರಿ. ಈ ನಿಯಮವನ್ನು ಬಹುತೇಕ ಎಲ್ಲಾ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಕೂಡ ನೀವು ಅನ್ವಯ ಮಾಡಿದರೆ ಇಡೀ ರಾಜ್ಯದ ದಲಿತ ಸಮುದಾಯದ ಒಂದು ಆರ್ಥಿಕ ಜೀವನ ಮಟ್ಟ ಮೇಲಕ್ಕೆ ಬರುವುದಕ್ಕೆ ಇದರಿಂದ ಸಾಧ್ಯವಾಗುತ್ತದೆ ಎಂಬ ವಿಚಾರವನ್ನು ನಾನು ಇಲ್ಲಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಮೊನ್ನೆದಿವಸ ಇಲ್ಲಿ ಕಂದಾಯ ಇಲಾಖೆಯ ಬೇಡಿಕೆ ಮೇಲೆ ಚರ್ಚೆಗೆ ಬಂದಾಗ ಪರಿಶಿಷ್ಟ ಜಾತಿ ಜನರಿಗೆ ಸ್ಮಶಾನಕ್ಕೆ ಭೂಮಿ ಇಲ್ಲ ಎನ್ನುತಕ್ಕಂಥ ಸಂದರ್ಭದಲ್ಲಿ ಅದರ ಬಗ್ಗೆ ಅನೇಕ ಅಭಿಪ್ರಾಯಗಳು ಬಂದವು. ಪರಿಶಿಷ್ಟ ಜಾತಿ ಅಲ್ಲದೆ ಎಲ್ಲಾ ವರ್ಗದವರಿಗೆ ಅನುಕೂಲವಾಗುವಂತೆ ಸಾಮಾನ್ಯವಾಗಿ ಒಂದೇ ಭೂಮಿಯಲ್ಲಿ ಎಲ್ಲಾ ಸಮಾಜದವರು ಅಲ್ಲಿ ಮಾಡಬೇಕೆಂಬ ಒಂದು ಅಭಿಪ್ರಾಯ ಬಂತು. ಬಹುತೇಕವಾಗಿ ಅದು ಅನುಷ್ಠಾನಕ್ಕೆ ಬರತಕ್ಕಂಥದು ಬಹಳ ವಿಳಂಭವಾಗುತ್ತಿದೆ. ಇವತ್ತಿನದಿವಸ ದಲಿತರ ಬದುಕು ಹಳ್ಳಿಯಲ್ಲಿ ಯಾವ ರೀತಿ ಇದೆ ಎಂದರೆ ಅವರು ಮರ್ಯಾದೆಯಲ್ಲಿ ಜೀವನ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಅವರಿಲ್ಲ. ಅವರು

ಸತ್ತ ಮೇಲಾದರು ಕೂಡ ಅವರ ಅಂತ್ಯಸಂಸ್ಕಾರ ಮಾರ್ಯದೆಯುತವಾಗಿ ಆಗಬೇಕು. ಅವರ ಹೆಣ ಬೀದಿ ನಾಯಿ–ನರಿ ಪಾಲಾಗಬಾರದು. ಆದ್ದರಿಂದ, ಶವ ಸಂಸ್ಕಾರ ಮಾಡುವುದಕ್ಕೆ ಭೂಮಿಯನ್ನು ಕೊಡತಕ್ಕಂಥ ವ್ಯವಸ್ಥೆ ಇವತ್ತು ಆಗಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಎಲ್ಲಾ ಜಿಲ್ಲೆಗಳಲ್ಲಿ ಇದಕ್ಕಾಗಿ 10 ಕೋಟಿ ರೂಪಾಯಿಗಳನ್ನು ಮೀಸಲಾಗಿಡಬೇಕು. SCP/TSP ಯೋಜನೆಯಲ್ಲಿ ಏನು ದುಡ್ಡಿದೆ ಅದರಲ್ಲಿ ಪ್ರತಿ ಜಿಲ್ಲೆಗೆ ಶವ ಸಂಸ್ಕಾರಕ್ಕಾಗಿ ಭೂಮಿಯನ್ನು ಖರೀದಿ ಮಾಡುವುದಕ್ಕೆ ಪ್ರತಿ ಜಿಲ್ಲೆಗೆ 10 ಕೋಟಿ ರೂಪಾಯಿಗಳನ್ನು ಮೀಸಲಿಡಬೇಕೆಂಬ ಒಂದು ವಿನಂತಿಯನ್ನು ನಾನು ಇಲ್ಲಿ ಮಾಡುತ್ತೇನೆ. ಇನ್ನೊಂದು ದೊಡ್ಡ ವಿಚಾರ ಏನೆಂದರೆ, ಇವತ್ತಿನದಿವಸ ಸರ್ಟಿಫಿಕೇಟ್ ಕೊಡುತ್ತೇವೆ. ಆದರೆ, ಏನಾಗಿದೆ ಎಂದರೆ, ಬೇರೆ ಬೇರೆ ರಾಜ್ಯಗಳಲ್ಲಿ ವಾಸ ಮಾಡತಕ್ಕಂಥ ಜನರು ಕರ್ನಾಟಕ ರಾಜ್ಯಕ್ಕೆ ಬಂದು ನಾವು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಸರ್ಟಿಫಿಕೇಟ್‌ನ್ನು ಪಡೆಯುತ್ತಿದ್ದಾರೆ. ಬೇರೆ ಕಡೆಯಿಂದ ಅಂದರೆ, ಧಾರವಾಡ ಜಿಲ್ಲೆಯವರು ಬಿಜಾಪುರಕ್ಕೆ ಬಂದು ಪರಿಶಿಷ್ಟ ಜಾತಿಯ ಸರ್ಟಿಫಿಕೇಟ್ ಅನ್ನು ಪಡೆಯುತ್ತಿದ್ದಾರೆ. ಆದ್ದರಿಂದ, ಸರ್ಕಾರದವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ಇವತ್ತು ಬಿಜಾಪುರದ ವ್ಯಕ್ತಿ ಧಾರವಾಡದಲ್ಲಿ ಪರಿಶಿಷ್ಟ ಜಾತಿಯ ಸರ್ಟಿಫಿಕೇಟ್ ಪಡೆದರೆ ಆತ ಬಿಜಾಪುರದಲ್ಲಿ ಯಾವ ಮೂಲ ಜಾತಿಗೆ ಸೇರಿದ್ದಾನೆಂದು ಅಂದರೆ ಯಾವ ಪರಿಶಿಷ್ಟ ಜಾತಿಗೆ ಸೇರಿದ್ದಾನೆಂಬ ಬಗ್ಗೆ ತಾವು ಪರಿಶೀಲನೆ ಮಾಡಿ ಸರ್ಟಿಫೀಕೆಟ್ ಕೊಡತಕ್ಕಂಥ ಕೆಲಸವನ್ನು ಮಾಡಬೇಕು. ಜೊತೆಗೆ ಬೇರೆ ರಾಜ್ಯಗಳಿಂದ ಬಂದಿರತಕ್ಕಂಥ ಯಾವುದೇ ವ್ಯಕ್ತಿ ಇಲ್ಲಿ ಪ್ರಮಾಣಪತ್ರವನ್ನು ಪಡೆದುಕೊಳ್ಳುವುದಾದರೆ ಆತ ಯಾವ ರಾಜ್ಯದಿಂದ ಬಂದಿದ್ದಾನೆಂದು ಮತ್ತು ಆತ ಅಲ್ಲಿ ಯಾವ ಸಮುದಾಯವನ್ನು ಪ್ರತಿನಿದಿಸುತ್ತಾನೆಂಬ ಬಗ್ಗೆ ಸಂಪೂರ್ಣವಾದಂಥ ಒಂದು verification ಮಾಡಿ ತಾವು ಸರ್ಟಿಫಿಕೆಟ್ ಕೊಟ್ಟರೆ ಮಾತ್ರ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಿದೆ. ಇದನ್ನು ತಡೆಗಟ್ಟುವುದಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಒಂದು CRE Cell ಇದೆ. ಕೊಟ್ಟಿರುವ ಸರ್ಟಿಫಿಕೇಟ್‌ಗಳನ್ನು

ಗುರುತಿಸಿ ಅವರಿಗೆ ಶಿಕ್ಷೆ ಕೊಡತಕ್ಕಂಥ ಒಂದು ಕೆಲಸವನ್ನು CRE Cell ಮಾಡುತ್ತದೆ. ಆದರೆ, ಇವತ್ತಿನದಿವಸ CRE Cell ನ ಪರಿಸ್ಥಿತಿ ಹೇಗಿದೆ ಎಂದರೆ, ಅದು ಹಲ್ಲು ಇಲ್ಲದ ಹಾವಿನಂತೆ ಕೆಲಸ ಮಾಡುತ್ತಿದೆ. ಅದಕ್ಕೆ ಯಾವುದೇ ರೀತಿಯ ಸೌಲಭ್ಯಗಳಿಲ್ಲ. ಇವತ್ತಿನದಿವಸ CoD ಗೆ ವಿಶೇಷವಾದಂಥ ಭತ್ಯೆಗಳು, TA & DA ಕೊಡುತ್ತೀರಿ ಹಾಗೆಯೇ Internal Security ಗೆ ಯಾವ ರೀತಿಯಾಗಿ ವಿಶೇಷವಾದಂಥ ಭತ್ಯೆಗಳನ್ನು ಕೊಡುವ ಹಾಗೆ CRE Cell ಗೂ ಕೊಡಬೇಕು. ಇವತ್ತಿನದಿವಸ CRE Cell ಗೆ ಯಾವುದೇ ರೀತಿಯಾದಂಥ ಅನುಕೂಲಗಳನ್ನು ಕೊಟ್ಟಿಲ್ಲ. ಆದ್ದರಿಂದ, ಇವತ್ತಿನ ದಿವಸ ದಕ್ಷ ಅಧಿಕಾರಿಗಳು ಅಲ್ಲಿಗೆ ಬಂದು ಕೆಲಸ ಮಾಡುವುದಕ್ಕೆ ತಯಾರಿಲ್ಲ. ತನಿಖೆ ನಿಷ್ಪಕ್ಷಪಾತವಾಗಿ ಆಗಿ ಅಪರಾಧಿಗಳಿಗೆ ಶಿಕ್ಷೆ ಆಗಬೇಕೆಂದರೆ ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ (ಸಿಆರ್‌ಇ ಸೆಲ್) ಏನಿದೆ ಅದಕ್ಕೆ ಒಂದು ಶಕ್ತಿಯನ್ನು ತಾವು ಕೊಡಬೇಕಾಗುತ್ತದೆ. ಯಾವರೀತಿಯಾಗಿ CoD and Internal Security ಗೆ ಯಾವ ರೀತಿಯಾದ ಆದ್ಯತೆಯನ್ನು ಕೊಡಲಾಗಿದೆಯೋ ಅದೇ ರೀತಿಯಾದ ಆದ್ಯತೆಯನ್ನು ನಮ್ಮ ಸಿಆರ್‌ಇ ಸೆಲ್‌ಗೆ ಕೊಟ್ಟಾಗ ಮಾತ್ರ ಇವುಗಳನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂಬ ಮಾತನ್ನು ಹೇಳಿ ಒಂದೆರೆಡು ವಿಚಾರಗಳನ್ನು ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪ್ರಿಯಾಂಕ ಎಂ. ಖರ್ಗೆ (ಚಿತ್ತಾಪುರ):- ಮಾನ್ಯ ಉಪಾಧ್ಯಕ್ಷರೆ, ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಸರ್ಕಾರವು 2014-15ನೇ ಸಾಲಿನಲ್ಲಿ ಎಸ್‌ಸಿಪಿ ಅನುಷ್ಠಾನಕ್ಕಾಗಿ ₹ 11,518 ಕೋಟಿ ಹಣವನ್ನು ಹಂಚಿಕೆ ಮಾಡಿರುವುದು ಬಹಳ ಸ್ವಾಗತಾರ್ಹವಾದ ವಿಚಾರ. ಹಿಂದಿನ ಸಾಲಿನಲ್ಲಿ ಕೇವಲ 6,135 ಕೋಟಿ ರೂಪಾಯಿ ಮಾತ್ರ ಇದಕ್ಕಾಗಿ ಮೀಸಲಾಗಿಡಲಾಗಿತ್ತು. ಅಂದರೆ, ಕಳೆದ ಸಾಲಿಗೆ ಹೋಲಿಸಿದಾಗ ಈ ಸಾಲಿನಲ್ಲಿ ಹೆಚ್ಚಳವಾದ ಹಣ approximately 5,000 ಕೋಟಿ ರೂಪಾಯಿಗಳಷ್ಟು ಆಗಿದೆ. ಇದಕ್ಕಾಗಿ ಮಾನ್ಯ ಮುಖ್ಯ

ಮಂತ್ರಿಗಳಿಗೆ ನಾವೆಲ್ಲರೂ ಅಭಿನಂದನೆಯನ್ನು ಸಲ್ಲಿಸಬೇಕಾಗುತ್ತದೆ. ಅದಲ್ಲದೆ ಮಾನ್ಯ ಅಲಗೂರು ಸಾಹೇಬರು ಹೇಳಿದ ಹಾಗೆ ಅನುಸೂಚಿತ ಜಾತಿ ಉಪ ಯೋಜನೆ ಹಾಗೂ ಬುಡಕಟ್ಟು ಉಪ ಯೋಜನೆ ಅನುಷ್ಠಾನಕ್ಕಾಗಿ ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ರೂಪಿಸುವುದು ಆರ್ಥಿಕ ಸಂಪನ್ಮೂಲಗಳ ಉಪಯೋಜನೆ ಅಧಿನಿಯಮ 2013, ಇದನ್ನು ಜಾರಿಗೆ ತಂದಿರುವುದು ಕೂಡ ಬಹಳ ಸ್ವಾಗತಾರ್ಹವಾದ ವಿಷಯ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಂಥ ಒಂದು ಕ್ರಾಂತಿಕಾರವಾದಂಥ ಅಧಿನಿಯಮ ತಂದಂಥ ನಮ್ಮ ಸರ್ಕಾರ ಹಾಗೂ ಮಾನ್ಯ ಮುಖ್ಯ ಮಂತ್ರಿಗಳಿಗೆ ನಾವು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸಬೇಕಾಗುತ್ತದೆ. ಆದರೆ, ಈ ಯೋಜನೆ ಏನಿದೆ ಇದನ್ನು ಕ್ರಮಬದ್ಧವಾಗಿ ಜಾರಿಗೊಳಿಸಲು ನಿಯಮ ರಚಿಸತಕ್ಕಂಥದ್ದಕ್ಕೆ ಬಹಳ ಒಂದು ತೊಡಕು ಆಗಿದೆ. ಇದನ್ನು ನಾವು ಸಮರ್ಪಕವಾಗಿ ಜಾರಿಗೆ ತರಬೇಕಾದರೆ ಇದಕ್ಕೆ ಶೀಘ್ರವಾಗಿ ನಿಯಮವನ್ನು ರಚಿಸಬೇಕಾಗುತ್ತದೆ. ಈಗಾಗಲೇ ಮೊದಲನೇ ತ್ರೈಮಾಸಿಕ ಮುಗಿದು ಹೋಗಿದೆ. ಆದರೂ ಕೂಡ ನಾವೆಲ್ಲರೂ action plan ತಯಾರು ಮಾಡುವುದರಲ್ಲಿ ಕಾಲ ಕಳೆಯುತ್ತಿದ್ದೇವೆ. ಈಗ ಅದನ್ನು ಅನುಷ್ಠಾನ ಮಾಡಬೇಕಾದರೆ, ಸಕಾಲದಲ್ಲಿ ಕಾರ್ಯಯೋಜನೆಯನ್ನು ರೂಪಿಸ ಬೇಕಾಗಿರುವ ಅನಿವಾರ್ಯತೆ ಇವತ್ತು ನಮ್ಮೆಲ್ಲರಿಗೂ ಇದೆ. ಅದು ಅಲ್ಲದೆ ಕಾನೂನಿನಲ್ಲಿ ರಾಜ್ಯ ಅಭಿವೃದ್ಧಿ ಪರಿಷತ್ತು ನೋಡೆಲ್ ಏಜೆನ್ಸಿ ಹಾಗೂ ನೋಡೆಲ್ ಇಲಾಖೆಗಳನ್ನು ಸಹ ಸಾಂಸ್ಥಿಕ ವ್ಯವಸ್ಥೆಯನ್ನು ಮಾಡಿದರು ಸಹ ಈ ವ್ಯವಸ್ಥೆ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಮ್ಮ ಬಜೆಟ್ ಅನುಷ್ಠಾನಕ್ಕೆ ಬರುತ್ತಿಲ್ಲ. ಆದಕಾರಣ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಮಂತ್ರಿಗಳಲ್ಲಿ ಸಮರ್ಪಕವಾಗಿ ಯೋಜನೆ ಅನುಷ್ಠಾನ ಮಾಡಬೇಕಾಗಿದ್ದರೆ ಹೊಸ ಸಂಸ್ಥೆಯನ್ನು ಸ್ಥಾಪನೆ ಮಾಡಬೇಕಾದ ಅನಿವಾರ್ಯತೆ ಇದೆ. ಏಕೆಂದರೆ ಈ ನಿಟ್ಟಿನಲ್ಲಿ ನಾವು ರಾಜ್ಯದಲ್ಲಿ ಅಥವಾ ಜಿಲ್ಲಾಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಪ್ರಾಧಿಕಾರವನ್ನು ಸ್ಥಾಪಿಸಿ ಅವುಗಳಿಗೆ ರಾಜ್ಯಮಟ್ಟದಲ್ಲಿ ಅಧ್ಯಕ್ಷರನ್ನು ನೇಮಿಸಿ ಯೋಜನೆಯನ್ನು ಕ್ರಿಯಾಶೀಲಗೊಳಿಸಬೇಕೆಂದು ನನ್ನ ಒಂದು

ವಿನಂತಿ ಇದೆ. ಮಾನ್ಯ ಮುಖ್ಯಮಂತ್ರಿಯವರ ಮತ್ತೊಂದು ದಿಟ್ಟ ಹೆಜ್ಜೆ ಏನೆಂದರೆ, ದಿನಾಂಕ: 13–3–2013 ರಂದು ಡಾ॥ ಅಂಬೇಡ್ಕರ ಅಭಿವೃದ್ಧಿ ನಿಗಮದಲ್ಲಿ ಬಾಕಿ ಇರುವ ಒಟ್ಟು 350 ಕೋಟಿ ರೂ.ಗಳ ಸಾಲ ಮನ್ನಾ ಮಾಡಿ ಪರಿಶಿಷ್ಟ ಜಾತಿ ಫಲಾನುಭವಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಇದು ಒಂದು ಚಾರಿತ್ರಿಕ ತೀರ್ಮಾನವೇ ಸರಿ. ಈ ನಿಟ್ಟಿನಲ್ಲಿ ಎಲ್ಲಾ ಫಲಾನುಭವಿಗಳಿಗೆ ಸಾಲ ತೀರುವಳಿ ಪ್ರಮಾಣ ಪತ್ರ ವಿತರಿಸುವಂತೆ ಕ್ರಮ ತೆಗೆದುಕೊಳ್ಳಲು ಮನವಿ ಮಾಡುತ್ತೇನೆ. 350 ಕೋಟಿ ರೂ.ಗಳನ್ನು ಸರ್ಕಾರವೇ ಮರು ಪಾವತಿ ಮಾಡಲು ಒತ್ತಾಯಿಸುತ್ತೇನೆ. ಈ ವರ್ಷದ ಆಯವ್ಯಯದಲ್ಲಿ ಸಾಲವನ್ನು ಭರಿಸಲು ಡಾ॥ ಅಂಬೇಡ್ಕರ ಅಭಿವೃದ್ಧಿ ನಿಗಮಕ್ಕೆ ಅನುಸೂಚಿತ ಜಾತಿಗಳ ಉಪಯೋಜನೆಯಿಂದ 100 ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಈ ಹಣವನ್ನು ಸರ್ಕಾರವು ಬೇರೆ ಭಾಗದಿಂದ ಭರಿಸಬೇಕೆಂದು ಒತ್ತಾಯ ಪೂರ್ವಕವಾಗಿ ನಾನು ವಿನಂತಿ ಮಾಡುತ್ತಿದ್ದೇನೆ. ಏಕೆಂದರೆ, ಇದನ್ನು ನಾವು ಮಾಡಿದರೆ ಈ ಉಳಿದಂಥ ಹಣ ಇರುತ್ತದೆ ಎಸ್‌ಸಿ:ಎಸ್‌ಟಿ ಜನಾಂಗದ ಯುವಕರ empowerment ಗೆ ನಾವು ಸದುಪಯೋಗ ಮಾಡಿಕೊಳ್ಳಬಹುದೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ರಾಜು ಆಲಗೂರವರು fake certificates ಬಗ್ಗೆ ಒಂದು ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದರು. ಈಗ students ಆಗಲಿ, ಉದ್ಯೋಗಕ್ಕೆ ಆಗಲಿ ಸರ್ಕಾರದಲ್ಲಿ ಕೂಡ ಇದು promotion ಗಳಿಗೆ misuse ಆಗುತ್ತಿದೆ. ಇದಕ್ಕೆ ಯಾವುದೇ ಮಾನದಂಡವನ್ನು ಯಾರು ನೋಡುತ್ತಿಲ್ಲ. ನಮ್ಮ ಹೈದ್ರಾಬಾದ್–ಕರ್ನಾಟಕ ಭಾಗದಲ್ಲಿ ಮೊನ್ನೆ ಒಬ್ಬ ಪೊಲೀಸ್ ಅಧಿಕಾರಿಯ ಹತ್ತಿರ ಮಾತನಾಡಬೇಕಾದರೆ ಕೇಳಿದೆ, fake certificates ನಲ್ಲಿ ಎಷ್ಟು ಜನ promotion ತೆಗೆದುಕೊಂಡಿದ್ದಾರೆಂದರೆ ಸಾವಿರಾರು ಜನರು ಎಂದರು. ಆದರೆ ಅದನ್ನು ಕಂಡು ಹಿಡಿದ ಮೇಲೆ ಅವರಿಗೆ ಮಾನದಂಡ ಏನು? They are just put back into general pool. ಅವರಿಗೆ ಯಾವುದೇ ಒಂದು ಮಾನದಂಡ ಇಲ್ಲ. ಇವತ್ತು punishment ಇಲ್ಲ. ಆದ್ದರಿಂದ ಅವರು fake certificate ಹಾವಳಿ ಹೆಚ್ಚಾಗುತ್ತಿದೆ ವಿನಹಃ ಕಡಿಮೆ

ಆಗುತ್ತಿಲ್ಲ. ಅವರು general poolಗೆ ವಾಪಸ್ಸು ಬಂದು ಬಿಡುತ್ತಾರೆ. ಆದರೆ ಆ ಜನಾಂಗದವರಿಗೆ ಆಗಿರುವ ಅನ್ಯಾಯ ಅವರದ್ದು time lapse ಆಗಿರುತ್ತದೆ, ಅವರ time ಎಷ್ಟು waste ಆಗಿರುತ್ತದೆ, ಎಷ್ಟೋ ಕೋರ್ಟ್ ಕಚೇರಿಗಳಿಗೆ ಹೋಗಿರುತ್ತಾರೆ. ಆದ್ದರಿಂದ ಅದಕ್ಕೆ ನಾವು ಯಾವುದೇ ರೀತಿಯಲ್ಲಿ ಪರಿಗಣಿಸುತ್ತಿಲ್ಲ. ಈಗ ಏನಾಗಿದೆ ಎಂದರೆ, ನಾವು ರಾಜಕೀಯ ದೃಷ್ಟಿಯಿಂದ ನಾವು ಎಲ್ಲಾ ಜನಾಂಗಕ್ಕೆ ಒಂದೊಂದು ನಿಗಮ ಮಾಡಿ ಬಿಟ್ಟಿದ್ದೇವೆ. ಡಾ॥ ಅಂಬೇಡ್ಕರ್ ಅಭಿವೃದ್ಧಿ ನಿಗಮ ಆಯಿತು, ಬಾಬು ಜಗಜೀವನ್‌ರಾಂ ನಿಗಮ ಆಯಿತು

ಶ್ರೀ ಬಿ.ಬಿ. ನಿಂಗಯ್ಯ (ಮೂಡಿಗೆರೆ):– ಮಾನ್ಯ ಉಪಾಧ್ಯಕ್ಷರೆ, ಈ fake certificate ಎಲ್ಲಿಯವರೆಗೆ ಹೋಗಿದೆ ಎಂದರೆ ಉದ್ಯೋಗ ಮತ್ತು ವಿದ್ಯಾರ್ಹತೆಗೆ ಸೀಮಿತವಾಗಿಲ್ಲ. MLA ಮತ್ತು MP ಗಳು ಚುನಾವಣೆಗೆ ನಿಲ್ಲುವುದಕ್ಕೆ ಬಳಕೆಯಾಗುತ್ತಿದೆ. Law and Parliamentary Affairs Minister ಇದ್ದಾರೆ, ಮಹದೇವಪ್ಪನವರು ಇದ್ದಾರೆ, ಈ ಬಾರಿ ನಡೆದು ಹೋಯಿತು. ಬಹುಶಃ ಅದು ತಮಗೆ ಗೊತ್ತಿದೆ. ಹೀಗೆ ಆದರೆ ಯಾವ ಉದ್ದೇಶಕ್ಕಾಗಿ ಭಾರತದ ಸಂವಿಧಾನ ಈ ದಲಿತರಿಗೆ ಅಥವಾ ಸಮಾಜದಲ್ಲಿ ಶೋಷಣೆಗೆ ಒಳಗಾದವರಿಗೆ ಅವಕಾಶವನ್ನು ಮಾಡಿಕೊಟ್ಟಿತ್ತು ಅದರ ದುರುಪಯೋಗ ಎಲ್ಲಾ ಹಂತದಲ್ಲಿ ಆಗುತ್ತಿದೆ ಎನ್ನತಕ್ಕಂಥದು. ಆ ದೃಷ್ಟಿಯಿಂದ ನಾನು ಮಾನ್ಯ ಸಚಿವರನ್ನು ತಮ್ಮ ಮೂಲಕ ವಿನಂತಿಯನ್ನು ಮಾಡುತ್ತೇನೆ. Government should take stern action against those people. ಇವತ್ತು announce ಮಾಡಬೇಕು. ನಾವು ಗ್ರಾಮ ಸಭೆ ಮಾಡುತ್ತೇವೆ. ಅಲ್ಲಿ ಕೊಡತಕ್ಕಂಥ ಸಮಯದಲ್ಲಿ ಬಹಿರಂಗವಾಗಿ ಬರುತ್ತಾರೆ. ಇವತ್ತು ಯಾರು fake certificate ತೆಗೆದುಕೊಂಡಿದ್ದಾರೆ ಅವರು ಹೌದೋ ಅಥವಾ ಅಲ್ಲ ಎನ್ನುವುದಕ್ಕೆ ಅವರನ್ನು ಅಲ್ಲಿ ಬಹಿರಂಗವಾಗಿ ಮಾಡಬೇಕು. ಇಲ್ಲದಿದ್ದರೆ ಇದು MLA MP ವರೆಗೆ ಬಂದು ಹೋಯಿತು. ಇನ್ನು ಯಾವುದು ಬಿಡುತ್ತಾರೆ.

ಶ್ರೀ ಪ್ರಿಯಾಂಕ್ ಖರ್ಗೆ:– ಮಾನ್ಯ ಉಪಾಧ್ಯಕ್ಷರೆ, MLA, MP ಗಳದ್ದು ಹೇಗಾದರೂ ನೋಡಿಕೊಳ್ಳುತ್ತಾರೆ ಸರ್. ಆದರೆ ಬಡ ಜನರು ಅವರ

ಉದ್ಯೋಗ ಏನಾಗಬೇಕು, ಅವರ promotions ಏನಾಗಬೇಕು. ಕಷ್ಟಪಟ್ಟು ಈ ವ್ಯವಸ್ಥೆಯ ಒಳಗಡೆ ಬಂದಿರುವುದು.

ಶ್ರೀ ಬಿ.ಬಿ. ನಿಂಗಯ್ಯ:- ನಾನು ಅದನ್ನು dispute ಮಾಡುತ್ತಿಲ್ಲ. ಅದನ್ನು ಸೇರಿಕೊಂಡು..

SRI. PRIYANK M KHARGE:- I am looking at the bigger picture. We have to cater to the bottom of the pyramid also. ಅದು ಕೂಡ ನಾವು ಗಂಭೀರವಾಗಿ ಪರಿಶೀಲನೆ ಮಾಡಬೇಕು. ಅವರು ಹೇಳಿದಂತೆ ಸಾಕಷ್ಟು ಅಭಿವೃದ್ಧಿ ನಿಗಮಗಳನ್ನು ಮಾಡಿದ್ದೇವೆ. ವಿಶೇಷವಾಗಿ ಕಳೆದ ಸರ್ಕಾರದಲ್ಲಿ ತಾಂಡಾ ಅಭಿವೃದ್ಧಿ ನಿಗಮ ಬಂದಿದೆ. ಆದರೆ ಅದರಲ್ಲಿ ಹಣ ಇಲ್ಲ. ಇವತ್ತು ಸಣ್ಣ ಸೇವಾಲಾಲ್ ಗುಡಿ ಕಟ್ಟುವುದಕ್ಕೆ 5 ಲಕ್ಷ ರೂ.ಗಳನ್ನು ಕೇಳಬೇಕಾದರೂ ಸಹ ಈ ಅಭಿವೃದ್ಧಿ ನಿಗಮದಲ್ಲಿ ದುಡ್ಡು ಇಲ್ಲ. ನಾವು ರಾಜಕೀಯ ಲಾಭಕ್ಕೋಸ್ಕರ ಈ ಅಭಿವೃದ್ಧಿ ನಿಗಮಗಳನ್ನು ಮಾಡುತ್ತಿದ್ದೇವಾ ಅಥವಾ ಆ ಜನಾಂಗದ ಏಳಿಗೆಗೋಸ್ಕರ ನಾವು ಏನಾದರೂ ಮಾಡುತ್ತಿದ್ದೇವಾ ಎನ್ನುವುದನ್ನು ಗಂಭೀರವಾಗಿ ನಾವು ಪರಿಶೀಲನೆ ಮಾಡಬೇಕು. ಮಾನ್ಯ ಉಮಾಶ್ರೀ ಮೇಡಂರವರು ಕೂಡ ಇಲ್ಲಿ ಇದ್ದಾರೆ. ಅವರ ಇಲಾಖೆಯ ಬಗ್ಗೆ ಒಂದೆರಡು ಸಲಹೆಗಳನ್ನು ಕೊಡಬೇಕಾದರೆ, ವಿಶೇಷವಾಗಿ ನಾವು ಯಾವಾಗಲೂ ಬರೀ ನವೆಂಬರ್ ಒಂದರಂದು ರಾಜ್ಯೋತ್ಸವ ದಿನ ಬಂದಾಗ ಮಾತ್ರ ಕನ್ನಡ ಉಳಿಸಿ ಕನ್ನಡ ಬೆಳೆಸಿ ಎನ್ನುವುದು ಹೊರತು ಉಳಿದ 364 ದಿವಸವು ನಾವು ಉಸಿರು ಎತ್ತುವುದಿಲ್ಲ. ನನ್ನ ಮನವಿ ಏನೆಂದರೆ, ನಾವು ನಿಜವಾಗಲೂ ಕನ್ನಡ ಉಳಿಸಬೇಕು, ಬೆಳೆಸಬೇಕು ನಾವು ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಬಿಟ್ಟು ಹೋಗಬೇಕೆಂದರೆ, ನಾವು ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಕನ್ನಡ ಭವನವನ್ನು ನಿರ್ಮಾಣ ಮಾಡಬೇಕು. ಕನ್ನಡ ಭವನ ಎಂದರೆ, it should not remain as a mere structure. ಅಲ್ಲಿ ಒಂದು ಸಭಾಂಗಣ ಮಾಡಿ ನಾವು ಅಲ್ಲಿ ಒಂದು ಲೈಬ್ರರಿಯನ್ನು ಮಾಡಬೇಕು. Department of Library ಜೊತೆ ಹೊಂದಾಣಿಕೆ ಮಾಡಿಕೊಳ್ಳುತ್ತೀರೋ ಅಥವಾ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಥವಾ

ಇಲಾಖೆಯಿಂದ ಪುಸ್ತಕ ತರಿಸಿಕೊಳ್ಳುತ್ತೀರೋ ಅಥವಾ corporate social responsibility ಮುಖಾಂತರ ಮಾಡಿಕೊಳ್ಳುತ್ತೀರೋ ಅಥವಾ Higher Education ಮುಖಾಂತರ ತಾವು connect ಮಾಡಿಕೊಳ್ಳುತ್ತೀರೋ ಅದು ಅವರ ವಿವೇಚನೆಗೆ ಬಿಟ್ಟಿದ್ದು. ಪ್ರತಿಯೊಂದು ತಾಲ್ಲೂಕಿನಲ್ಲಿ ಕನ್ನಡ ಭವನ ಇದ್ದು ಅಲ್ಲಿ ಒಂದು ಲೈಬ್ರರಿ ಮಾಡಿ ಅಲ್ಲಿ 10 ಕಂಪ್ಯೂಟರ್‌ಗಳನ್ನು ಮಾಡಿಕೊಟ್ಟರೆ ಜನರಿಗೆ ಆಸಕ್ತಿ ಬರುತ್ತದೆ. ಅಲ್ಲಿ ಹೋಗಿ ಬರುವ students ಇರಬಹುದು ಅಥವಾ ಸಾಹಿತಿಗಳಿಗೆ ಇರಬಹುದು, ಪತ್ರಕರ್ತರಿಗೆ ಇರಬಹುದು. ಅಲ್ಲಿ ಹೋಗಿ ಕುಳಿತು ಓದಿ ಬರುವುದಕ್ಕೆ ಒಂದು ಸ್ಥಳ ಆಗುತ್ತದೆ. ಅದು ಅಲ್ಲದೆ ವಿಶೇಷವಾಗಿ ಇವತ್ತು ನಾವು ಒಂದು IT,BT ಯುಗದಲ್ಲಿದ್ದೇವೆ. ಎಲ್ಲಾ ಶಾಸಕರು ಮತ್ತು ನಮ್ಮ ಶಹಾಪುರ ಶಾಸಕ ಮಿತ್ರರು ಹೇಳುತ್ತಿದ್ದರು. ನಾವು ನಮ್ಮ ಪ್ರಾಚೀನತೆಯನ್ನು ಕಳೆದುಕೊಳ್ಳುತ್ತಿದ್ದೇವೆ. Kannada is supposed to be a classical language. ಆದರೆ ನಮಗೆ classical tag ಸಿಕ್ಕಿದ್ದು ತಮಿಳು ಆದ ಮೇಲೆ. Why? Because, we have failed to archive our documents. We have failed to portray that we are much more older, much more ancient than Tamil or Telgu language. ಇವತ್ತು ನಮ್ಮ ಬಸವ ಸಾಹಿತ್ಯ ಅಷ್ಟೆ ಅಲ್ಲ. ಕರ್ನಾಟಕ ಗತವೈಭವ ಪುಸ್ತಕ ಇದೆಯಾ ಇಲ್ಲವೋ ಎಂದು ನೋಡುವುದಕ್ಕೆ ನಾನು ಮೊನ್ನೆ ಲೈಬ್ರರಿಗೆ ಹೋಗಿದ್ದೆ. ಅದು 200 ಪುಟ ಪುಸ್ತಕ ಇರಬಹುದು. ಆದರೆ ಕರ್ನಾಟಕದ ಏಕೀಕರಣಕ್ಕೋಸ್ಕರ ಆ ಪುಸ್ತಕ ಏನಿದೆ ಅದು ಬಹಳ ಮಹತ್ವಪೂರ್ಣವಾದ ಪಾತ್ರವನ್ನು ವಹಿಸಿದೆ. ನಮ್ಮ ಲೈಬ್ರರಿಯಲ್ಲಿ ಕೂಡ ಅದು ಇಲ್ಲ. ಅದನ್ನು digitize ಮಾಡಬೇಕಾಗಿದೆ. ಕನ್ನಡ ವಚನಗಳು ಇರಬಹುದು, ಸಾಹಿತ್ಯ ಇರಬಹುದು ಅದನ್ನು digitize ಮಾಡಬೇಕಾಗಿದೆ. ಅಕ್ಕಮಹಾದೇವಿ ವಚನ ಇರಬಹುದು, ಅಂಬಿಗರ ಚೌಡಯ್ಯನವರ ವಚನ ಇರಬಹುದು, ಇವೆಲ್ಲವನ್ನು ನಾವು e-books ಮಾಡಿಲ್ಲ, e-archive ಮಾಡಿಲ್ಲ, digitize ಮಾಡಿಲ್ಲವೆಂದರೆ, ಮುಂದಿನ ನಮ್ಮ ಪೀಳಿಗೆಗೆ ಇದು ಯಾವುದು ಲಭ್ಯವಾಗುವುದಿಲ್ಲ. ಅವರ ಇಲಾಖೆಗೆ ಸಂಬಂಧಪಟ್ಟಂತೆ I.C.D.S. (Integrated Child Development Service)

ಒಂದು ಸ್ಕೀಂ 30 ವರ್ಷದಿಂದ ಇದೆ. 1975 ಅಕ್ಟೋಬರ್ 2 ರಿಂದ ಇದು ಚಾಲನೆಯಲ್ಲಿದೆ. ಏಕೆಂದರೆ, ನಮ್ಮ ಮಕ್ಕಳಿಗೆ ಒಳ್ಳೆಯ ಪೌಷ್ಟಿಕ ಆಹಾರ ಸಿಗಬೇಕು. ಆದರೆ 35 ವರ್ಷವಾದರೂ ಕೂಡ, ಈವಾಗಲೂ ಕೂಡ ನಮಗೇನಿಲ್ಲಾ ಎಂದರೆ 36.5% mothers do not report the weight of the new born child. ಅಂದರೆ, malnutrition ನಿಂದ ಇನ್ನೂ ಕೂಡ ಇವತ್ತು ಮಕ್ಕಳು ಬಳಲುತ್ತಾ ಇದ್ದಾರೆ. 30% ಮಕ್ಕಳು ಏನಿದ್ದಾರೆ are below 2500 grams ಎಂದು U.N.O. report ಹೇಳುತ್ತದೆ. ನಾವು ಪಾಲಿಸಿ ಮಾಡಬೇಕಾದರೆ ಈ data collection ಅಂಗನವಾಡಿಯಿಂದ ತೆಗೆದುಕೊಳ್ಳುತ್ತೇವೆ. Whether the child is under nourished or malnourished ಎಂದು ನಾವು ಮಾಡಬೇಕಾದರೆ ಅಂಗನವಾಡಿ ಕಾರ್ಯಕರ್ತರು ಏನಿರುತ್ತಾರೆ 15 ರಿಂದ 18 ರೆಕಾರ್ಡ್‌ಗಳನ್ನು ತುಂಬಬೇಕು. ಅವರು daily ಮಾಡಬೇಕು. ಆದರೆ ಅವರು daily ಮಾಡುವುದಿಲ್ಲ. ಏಕೆಂದರೆ, ಒಬ್ಬ ಮಗುವಿಗೆ ನಾವು ಅರ್ಧ ಗಂಟೆ ಕೊಡಬೇಕಾಗುತ್ತದೆ. ಯಾವಾಗ CDPO ಬರುತ್ತಾರೆ ಆಗ ಮಾತ್ರ ಅಂಗನವಾಡಿ ಕಾರ್ಯಕರ್ತರು records ತುಂಬುತ್ತಾರೆ. ಅವರಿಗೆ ಮನಸ್ಸಿಗೆ ಬಂದಂತೆ ಮಾಡುತ್ತಾರೆ. So, ಗೊತ್ತಿರಲಾರದೆ, you are entering wrong data. ನೀವು wrong data enter ಮಾಡಿದಾಗ ಸಹಜವಾಗಿ CDPOಗೆ wrong data ಸಿಗುತ್ತದೆ. CDPO ಗೆ wrong data ಸಿಕ್ಕಾಗ ಸರ್ಕಾರಕ್ಕೆ wrong data ಸಿಗುತ್ತದೆ. ಆ data ದ ಮೇಲೆ ನಾವು policy ಮಾಡುತ್ತೇವೆ. ಆ policy ಮೇಲೆ ನಾವು financial allocation ಮಾಡುತ್ತೇವೆ. ಆದ್ದರಿಂದ ವಿಶೇಷವಾಗಿ ಈ ICDS ಏನಿದೆ ಇವತ್ತು ಮಕ್ಕಳ malnourishment ಇರಬಹುದು, infant mortality rate ಬಗ್ಗೆ ನಾವು ಮಾತನಾಡಬೇಕಾದರೆ ನಿಜವಾಗಲೂ ನಾವು serious ಆಗಿದ್ದರೆ, we should change the system at the bottom of the pyramind. ಆದ್ದರಿಂದ ಮಾನ್ಯ ಮಂತ್ರಿಗಳಲ್ಲಿ ಮನವಿ ಇದೆ. ದಯವಿಟ್ಟು ನಾವು ಬೇರು ಮಟ್ಟದಲ್ಲಿ ಆ ರೆಕಾರ್ಡ್ ಅನ್ನು ತುಂಬುವುದನ್ನು ಸರಳೀಕರಣ ಮಾಡಿದರೆ ಆಗ ಮಾತ್ರ ನಮಗೆ correct ಆಗಿ data ಸಿಗುತ್ತದೆ. ಮಾನ್ಯ ರೋಷನ್‌ಬೇಗ್‌ರವರೂ ಸದನದಲ್ಲಿದ್ದಾರೆ. ಎಲ್ಲರೂ ಇಲ್ಲಿರುವುದರಿಂದ ಸ್ವಲ್ಪ

advantage ತೆಗೆದುಕೊಳ್ಳುತ್ತೇನೆ. ನಮ್ಮ ಗುಲ್ಬರ್ಗಾ ಭಾಗದಲ್ಲಿ ಬಹಳ ವರ್ಷದಿಂದ ಏರ್‌ಪೋರ್ಟ್ ಕಾಮಗಾರಿ ನಡೆಯುತ್ತಿದೆ. ಮಾನ್ಯ ರೋಷನ್‌ಬೇಗ್‌ರವರು ಬಂದ ಮೇಲೆ ಕಾಮಗಾರಿ ಸ್ವಲ್ಪ ತೀವ್ರಗತಿಯನ್ನು ಹಿಡಿದಿದೆ. ಆದರೂ ಕೂಡ ಅದರಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿದ್ದು ನಿಜ. ಆದರೆ 85% of the airport work has already done. ಸ್ವಲ್ಪ ತಾಂತ್ರಿಕ ದೋಷದಿಂದ ಬ್ಯಾಂಕ್ ಗ್ಯಾರಂಟಿ ತೆಗೆದುಕೊಂಡು Regional Airport Holdings Authority of India ಗೆ ಮತ್ತು ILFA's partners ಗೆ ಏನೋ ವ್ಯತ್ಯಾಸವಾಗಿದೆ ಎಂದು ನಾವು ಕೇಳ್ಪಟ್ಟಿದ್ದೇವೆ. ಬ್ಯಾಂಕ್ ಗ್ಯಾರಂಟಿ ಕೂಡ Government of Karnataka is lapsed ಎಂದು ಕೇಳ್ಪಟ್ಟಿದ್ದೇವೆ. ನನ್ನ ಮನವಿ ಏನೆಂದರೆ, ಅಲ್ಲಿ ನಮ್ಮ ಏರ್‌ಪೋರ್ಟ್‌ನಿಂದ ಮೂರು ಕಿ.ಮೀ ನಲ್ಲಿ National Investment and Manufacturing Zone ಎಂದು ದೊಡ್ಡ ಪ್ರಾಜೆಕ್ಟ್ ಬರುತ್ತಿದೆ. 12,500 ಎಕರೆಯಲ್ಲಿ ಒಂದು industrial zone ಬರುತ್ತಿದೆ. ಆ ಭಾಗಕ್ಕೆ ಒಂದು ಸುವರ್ಣಾವಕಾಶ ಇದೆ one of the criteria for NIMZ is to develop is that the airport and the connectivity. ದಯವಿಟ್ಟು ಇದನ್ನು ಮಾಡುತ್ತಾರೆ ಎಂದು ನಾನು ಭಾವಿಸುತ್ತೇನೆ. ಮಾನ್ಯ ಖಮರುಲ್ಲಾ ಇಸ್ಲಾಂರವರೂ ಸದನದಲ್ಲಿದ್ದಾರೆ. ಕಳೆದ ನಮ್ಮ UPA-II ಸರ್ಕಾರದಲ್ಲಿ Urban Infrastructure Development for Small and Medium Towns (UIDSMT) ಒಂದು ಬೃಹತ್ ಯೋಜನೆ ಇತ್ತು. Tier-2, tier-3 cities ಗೆ ಚಿತ್ತಾಪುರ, ವಾಡಿಯಂತಹ ನಮ್ಮ ಪಟ್ಟಣ ಪಂಚಾಯಿತಿಗೆ ಸಾಕಷ್ಟು ಅದರಿಂದ ಲಾಭ ಆಗುತ್ತಿತ್ತು. 60 ಕೋಟಿ, 100 ಕೋಟಿ ರೂ.ಗಳ ಪ್ರಾಜೆಕ್ಟ್‌ಗಳು ಕೇಂದ್ರ ಸರ್ಕಾರಕ್ಕೆ ಹೋಗಿ ಆಗೆಯೇ ನೆಲಕಚ್ಚಿವೆ. ದಯವಿಟ್ಟು ಅದನ್ನು ಮಾಡಿದರೆ tier-2 citiesಗೆ ಮುನಿಸಿಪಾಟಿಲಿ ಇರುವ town ಗಳಿಗೆ ಉಪಯೋಗವಾಗುತ್ತದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಧನ್ಯವಾದಗಳು.

ಶ್ರೀ ನಾರಾಯಣಗೌಡ (ಕೃಷ್ಣರಾಜ ಪೇಟೆ):- ಮಾನ್ಯ ಅಧ್ಯಕ್ಷರೆ, ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ನಾನು ಮನವಿ ಮಾಡುವುದೇನೆಂದರೆ, ನಮ್ಮ ಕೆ.ಆರ್ ಪೇಟೆ ತಾಲ್ಲೂಕಿನ ನಗರಸಭೆಯಲ್ಲಿ 30,000 ಜನ ವಾಸ

ಮಾಡುತ್ತಿದ್ದಾರೆ. ಆದರೆ ಕುಡಿಯುವ ನೀರಿಗೆ ತುಂಬಾ ತೊಂದರೆ ಇದೆ. ಏಕೆಂದರೆ ಒಂದೇ ಒಂದು ಪೈಪ್‌ಲೈನ್ ಅನ್ನು ತಂದಿದ್ದಾರೆ. ಒಂದೇ ಮೋಟರ್ ಇದ್ದಿದ್ದು. ಅದು ಸುಟ್ಟುಹೋಗಿ ವಾರನುಗಟ್ಟಲೆ ಕುಡಿಯುವ ನೀರು ಬರುವುದಿಲ್ಲ. ಮತ್ತೆ ಕೆ.ಆರ್. ಪೇಟೆ ತಾಲ್ಲೂಕಿನ ಬಗ್ಗೆ ಡಿ.ಸಿ ಯವರು ಬಂದು ಸರ್ವೆ ಮಾಡಿ ನೋಡಿದ್ದಾರೆ. Town ನಲ್ಲಿ ಒಂದೂ ರಸ್ತೆಯೂ ಸರಿಯಿಲ್ಲ. 10 ಅಡಿ, 15 ಅಡಿ ರಸ್ತೆ ಹೊರಗೆ ಬಂದಿದೆ. 30 ಅಡಿ ರಸ್ತೆಯನ್ನು ಬಿಟ್ಟು ಮನೆಯನ್ನು ಕಟ್ಟಬೇಕು ಎನ್ನುವ ಕಾನೂನನ್ನು ತಾವು ಏನು ಹೂಡಿದ್ದೀರಿ, ಆದರೆ ಏನಾದರೂ emergency, accident ಆಗಿ ಬೆಂಕಿ ಬಿದ್ದರೂ fire engine ಹೋಗುವುದಕ್ಕೂ ಜಾಗ ಇಲ್ಲ. ಅಂತಹ ವ್ಯವಹಾರ ನಡೆದಿದೆ. ಜಲಸೂರು ಮತ್ತು ಬೆಂಗಳೂರು ಹೈವೇ ಇದೆ town ನೊಳಗೆ ಪಾಸ್ ಆಗಿದೆ. ಅದರೊಳಗೆ ಏನಾದರೂ ಒಂದು ಬಸ್ ಹೋದರೆ ಮತ್ತೆ ಇನ್ನೊಂದು ಬಸ್ ಹೋಗುವುದಕ್ಕೆ, ಒಂದು ಚಿಕ್ಕ ಕಾರೂ ಪಾಸ್ ಆಗುವುದಕ್ಕೆ ಸಾಧ್ಯವಿಲ್ಲ. ಅದನ್ನು ದಯವಿಟ್ಟು ಮಾನ್ಯ ಸಚಿವರು demolish ಮಾಡಿಸಬೇಕು. ಏಕೆಂದರೆ ನಾಗಮಂಗಲ, ಇಡೀ ಜಿಲ್ಲೆಯಲ್ಲಿಯೂ demolish ಆಗಿದೆ. ನಮ್ಮ ಕೆ.ಆರ್. ಪೇಟೆಯಲ್ಲಿ ಇದುವರೆಗೂ demolish ಮಾಡಿಲ್ಲ. ರಾಜಕಾರಣಿಗಳ ಒತ್ತಡ ಇದೆಯೋ ಏನೋ ಗೊತ್ತಿಲ್ಲ. ದಯವಿಟ್ಟು ಅದನ್ನು demolish ಮಾಡಿ ರೋಡ್‌ಅನ್ನು broad ಮಾಡಬೇಕು. ಅದರ ಮಧ್ಯೆ ನನ್ನದು ಸ್ವಂತ ಮನೆ ಇದೆ. Order ಮಾಡಿದರೆ ನಾನೇ demolish ಮಾಡಿಸುತ್ತೇನೆ. ದಯವಿಟ್ಟು ಅದಕ್ಕಾಗಿ ಅವಕಾಶ ಮಾಡಿಕೊಡಬೇಕಾಗಿದೆ. ಕೆ.ಆರ್. ಪೇಟೆ town ನಲ್ಲಿ ಒಂದು single park ಇಲ್ಲ. ವಯಸ್ಸಾದವರಿಗೆ ಏನಾದರೂ walking ಗೆ ಹೋಗಬೇಕೆಂದರೆ ರಸ್ತೆಯಲ್ಲಿ high wayನಲ್ಲಿ ಹೋಗುತ್ತಾರೆ. ಮೈಸೂರು ಮತ್ತು ಚನ್ನರಾಯನಪಟ್ಟಣದಲ್ಲಿ ತುಂಬಾ accident ಆಗುತ್ತಿವೆ. ಪಾರ್ಕ್‌ಗಳು sanction ಆಗಿವೆ. ಕಳೆದ ಬಾರಿ ಸರ್ಕಾರದವರು ಹಣವನ್ನೂ ಕೊಟ್ಟಿದ್ದಾರೆ. ಆದರೆ ಆಗಿಲ್ಲ. ಸಾವಿರಾರು ಮನೆಗಳು license ಇಲ್ಲದೇ ಕಟ್ಟಡಗಳು ಆಗಿವೆ. ಅದನ್ನು ತನಿಖೆ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತಿದ್ದೇನೆ. ಬತ್ತಿಗಳು, ಏಕೆಂದರೆ ಮಾರವಾಡಿಗಳಿಗೆ ಯಾರಿಗೋ

contract ಕೊಟ್ಟಿದ್ದಾರೆ. ಬೆಳಗ್ಗೆ ಹಾಕಿದರೆ ಸಾಯಂಕಾಲ ಆ ಬತ್ತಿ ಹೊರಟು ಹೋಗುತ್ತದೆ. ಎಲ್ಲಾ ಚೈನಾದಿಂದ ಬರುವಂತಹ ಬಲ್ಬ್‌ಗಳು. ಅಲ್ಲಿಗೆ ಇದುವರೆಗೂ ಯಾರನ್ನೂ Chief Officer ಹಾಕಿಲ್ಲ. ಯಾವುದೋ department ನಿಂದ Bill Collector, ಅವರು ಇವರು ಬರುತ್ತಾರೆ. ಅವರನ್ನು ಕೂರಿಸಿರುತ್ತಾರೆ. ತುಂಬಾ ಅವ್ಯವಹಾರ ನಡೆದಿದೆ. ಅದಕ್ಕಾಗಿ ದಯವಿಟ್ಟು ಮಾನ್ಯ ಸಚಿವರು ಇದಕ್ಕೆ ಸಹಕಾರ ನೀಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರಲ್ಲಿ ಮನವಿ ಏನೆಂದರೆ, ನಮ್ಮ ಕೆ.ಆರ್.ಪೇಟೆ ತಾಲ್ಲೂಕಿನಲ್ಲಿ ಅಂಗನವಾಡಿ ಸಮಸ್ಯೆ, ಇಡೀ ರಾಜ್ಯದಲ್ಲೇ ಅಂಗನವಾಡಿ ಸಮಸ್ಯೆ ಇದೆ ಎಂದು ಎಲ್ಲಾ ಸಚಿವರು ಹೇಳುತ್ತಿದ್ದಾರೆ. ತಾವೂ ಕೇಳಿಸಿಕೊಂಡಿದ್ದೀರಿ. ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಇನ್ನೂ ಮರದ ಕೆಳಗೆ ಕುಳಿತುಕೊಂಡು ಮಕ್ಕಳು ಊಟ ತಿನ್ನುವ ಅಂಗನವಾಡಿಗಳು ತುಂಬಾ ಇವೆ. ದಯವಿಟ್ಟು ಅದಕ್ಕೆ ಮಾನ್ಯ ಸಚಿವರು ಗಮನ ಕೊಟ್ಟು ಎಲ್ಲೆಲ್ಲಿ ಅಂಗನವಾಡಿಗಳಿಗೆ ಸರಿಯಾದ ಸೌಲಭ್ಯಗಳಿಲ್ಲ ಅಲ್ಲಿ ಕಟ್ಟಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಮಾನ್ಯ ಪ್ರಿಯಾಂಕ್ ಖರ್ಗೆಯವರು ಹೇಳಿದಂತೆ, ಲೈಬ್ರರಿ, ಕೆ.ಆರ್. ಪೇಟೆಯಲ್ಲಿ ಒಂದು ಲೈಬ್ರರಿಯನ್ನು ಮುನಿಸಿಪಾಲಿಟಿಯಿಂದ ಕೊಟ್ಟಿದ್ದಾರೆ. ಅಲ್ಲಿ ಕರೆಂಟ್ ಇಲ್ಲ. ಅದನ್ನೂ ಕೂಡ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಗೋಪಾಲಯ್ಯ (ಮಹಾಲಕ್ಷ್ಮಿ ಲೇಔಟ್):- ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರಾಭಿವೃದ್ಧಿ ಬಗ್ಗೆ ನನ್ನ ಕ್ಷೇತ್ರದಲ್ಲಿ ಸಂಬಂಧಿಸಿದಂತೆ ನನ್ನ ಕ್ಷೇತ್ರಕ್ಕೆ ಮೆಟ್ರೋ ರೈಲು ಬಂದಿದ್ದು ಆಯಿತು. ಬೆಂಗಳೂರಿನ ಜನ ಆ ಭಾಗದ ಜನ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದರು. ಮೆಟ್ರೋ ರೈಲು ಬಂದಾದ ಮೇಲೆ ಅಲ್ಲಿ ಇರುವಂತಹ ಕಾಮಗಾರಿಗಳು ಅಪೂರ್ಣವಾಗಿ ಆ ಭಾಗದಲ್ಲಿರುವಂತಹ ಯಾವುದೇ ಜನ ಓಡಾಡುವಂತೆ ಆಗಿಲ್ಲ. ಒಂದು ಕಡೆ ಕಸದ ಸಮಸ್ಯೆ ಇದೆ. ಇನ್ನೊಂದು ಕಡೆ ರಾಜಾಜಿನಗರ

ಮುಖ್ಯ ರಸ್ತೆ ಏನಿದೆ ಅಲ್ಲಿಂದ soap factoryವರೆಗೂ ಆ ಫುಟ್‌ಪಾತ್ ಮಧ್ಯೆಯಲ್ಲಿ ಕಸ ಬಿದ್ದಿರುವಂಥದ್ದು ಮೆಟ್ರೋದವರು ಎತ್ತಬೇಕು. ಸನ್ಮಾನ್ಯ ಮುಖ್ಯಮಂತ್ರಿಯವರೆ ಅದನ್ನು ಬಂದು ಉದ್ಘಾಟನೆ ಮಾಡಿರುವಂಥದ್ದು. ಇವತ್ತು ಬಹಳ ನೋವಾಗುತ್ತದೆ. ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳೇ ನಿರ್ದೇಶನ ಕೊಟ್ಟು ಬೆಂಗಳೂರನ್ನು ಗೌರವಿಸುವಂತಹ ಕೆಲಸ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ಎಲ್ಲಿ metro station ಅನ್ನು ಮಾಡುತ್ತೇವೆ ಆ ಸಂದರ್ಭದಲ್ಲಿ ಜನರು ಬಂದು ಹೋಗುವುದಕ್ಕೆ, ಆ ಸುತ್ತಮುತ್ತಲಿನ ಬಡಾವಣೆಯಿಂದ ಬಸ್‌ಗಳು ಬಂದು ಹೋಗುವುದಕ್ಕೆ, ನಿಲ್ಲಿಸುವುದಕ್ಕೆ ಅಲ್ಲಿ ಒಂದು ವ್ಯವಸ್ಥೆ ಮಾಡಬೇಕು. ಆ ಭಾಗದಲ್ಲಿ ಎಲ್ಲಿಯೂ ಸಹ ಮಾಡಿಲ್ಲ. ಯಶವಂತಪುರ ಇರಬಹುದು, ಮಹಾಲಕ್ಷ್ಮೀಲೇಔಟ್ ಇರಬಹುದು, soap factory ಇರಬಹುದು, ಅಲ್ಲೆಲ್ಲ ಜನರು ಬಂದು ರಸ್ತೆಯಲ್ಲಿಯೇ ಗಾಡಿ ನಿಲ್ಲಿಸಬೇಕು, ರಸ್ತೆಯಲ್ಲಿ ಗಾಡಿ ನಿಲ್ಲಿಸುವಂತಹ ಸಂದರ್ಭದಲ್ಲಿ ಆ ಸುತ್ತಮುತ್ತಲಿನಲ್ಲಿ ವಾಸ ಮಾಡುವಂತಹ, ವ್ಯಾಪಾರ ಮಾಡುವಂತಹ ಸಾಮಾನ್ಯ ಜನರಿಗೆ ತೊಂದರೆಯಾಗುವಂಥದ್ದನ್ನು ಇತ್ತೀಚಿನ ದಿನಗಳಲ್ಲಿ ಅಲ್ಲಿ ನೋಡುತ್ತಿದ್ದೇನೆ. ಅದನ್ನು ಸರಿಪಡಿಸುವಂತಹ ವ್ಯವಸ್ಥೆ ಮಾಡಬೇಕು. ಡಾ॥ ರಾಜ್‌ಕುಮಾರ್ ಸಮಾಧಿಯಿಂದ ಏನು ರಿಂಗ್ ರಸ್ತೆ ಇದೆ ಮಾಗಡಿ ಮುಖ್ಯ ರಸ್ತೆಯವರೆಗೂ ತಾವೇ ಅರ್ಜಿ ಸಮಿತಿ ಅಧ್ಯಕ್ಷರಾಗಿ ನನ್ನ ಕ್ಷೇತ್ರಕ್ಕೆ ಭೇಟಿ ಕೊಟ್ಟಿದ್ದೀರಿ. ಸುಮಾರು 7–8 ತಿಂಗಳು ಆಯಿತು. ರಿಂಗ್ ರೋಡ್ ಮುಗಿದು ಸುಮಾರು ವರ್ಷಗಳೇ ಆಗಿವೆ. ಅದರ ಪಕ್ಕದಲ್ಲಿರುವಂತಹ service ರಸ್ತೆ ಯಾವ ಕಾರಣಕ್ಕೋಸ್ಕರ ಮಾಡಿಲ್ಲ? ಅಲ್ಲಿ ಹತ್ತಾರು ಸಾವುನೋವುಗಳು ಆಗಿವೆ. ಇನ್ನುಮುಂದೆ ಸಾವುನೋವುಗಳು ಏನಾದರೂ ಆದರೆ ಬಿ.ಡಿ.ಎ ಅಧಿಕಾರಿಗಳೇ ನಿಜವಾಗಿಯೂ ಕಾರಣಕರ್ತರಾಗಿರುತ್ತಾರೆ. ತಾವು ಬಂದಂತಹ ಸಂದರ್ಭದಲ್ಲಿಯೂ ಅಧಿಕಾರಿಗಳಿಗೆ ನಿರ್ದೇಶನ ಕೊಟ್ಟಿದ್ದೀರಿ, ಲೆಟರ್ ಬರೆದಿದ್ದೀರಿ, ಒಂದು ಕಡೆ ಒಂದು ತೋಟ ಇದೆ. ಒಂದು ಕಡೆ ರಾಜರಾಜೇಶ್ವರಿ ನಗರಕ್ಕೆ ಸೇರುತ್ತದೆ ಮತ್ತೊಂದು ಕಡೆ ಮಹಾಲಕ್ಷ್ಮೀಲೇಔಟ್ ವಿಧಾನಸಭಾ ಕ್ಷೇತ್ರಕ್ಕೆ ಸೇರುತ್ತದೆ. ಆ ರಸ್ತೆ

ಅಪೂರ್ಣವಾಗಿ ಆ ಕ್ಷೇತ್ರದ ಜನರ ಸಾವುನೋವುಗಳಿಗೆ ಕಾರಣರಾಗಿದ್ದಾರೆ. ದಯಮಾಡಿ ಅದನ್ನು ಪೂರ್ಣಗೊಳಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಜೊತೆಗೆ ಮಧ್ಯೆಯಲ್ಲಿ sky walk ಮಾಡಬೇಕೆಂದು ವೈಜ್ಞಾನಿಕವಾಗಿ ಡಾ|| ರಾಜ್‌ಕುಮಾರ್ ರಸ್ತೆಯಲ್ಲಿ ಒಂದು sky walk ಪ್ರಾರಂಭವಾಗಿದೆ. ಆ ರೀತಿ ಉತ್ತಮ ಗುಣಮಟ್ಟದ sky walk ಅನ್ನು ಅಲ್ಲಿ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಾ, ಅಲ್ಲಿ fly over ಕೆಲಸ ಪ್ರಾರಂಭವಾಗಿ ಒಂದು ವರ್ಷಕ್ಕಿಂಥ ಜಾಸ್ತಿಯಾಯಿತು. ಒಂದು ಕಡೆ ನನ್ನ ಕ್ಷೇತ್ರದಲ್ಲಿರುವಂತಹ ಮನೆಗಳನ್ನು acquisition ಮಾಡುವುದಕ್ಕೆ ನೋಟಿಸ್ ಕೊಟ್ಟು ಮನೆಗಳನ್ನು ಖಾಲಿ ಮಾಡಿಸಿ ಸುಮಾರು 7–8 ತಿಂಗಳುಗಳು ಆಗಿವೆ. ಅದರ ಬಗ್ಗೆ ಬಿ.ಡಿ.ಎ ಅಧಿಕಾರಿಗಳು ಇಲ್ಲಿವರೆಗೂ ಸರಿಯಾದ ಕ್ರಮವನ್ನು ತೆಗೆದುಕೊಂಡು ಅವರಿಗೆ ಏನು ಪರಿಹಾರಧನ ಕೊಡಬೇಕು, ಅಲ್ಲಿ ಬರುವಂಥವು ಎಲ್ಲಾ corner site ಗಳು. ಎಲ್ಲಾ ಅಂಗಡಿಗಳು ಖಾಲಿಯಾಗಿವೆ. ಅಲ್ಲಿ ವ್ಯಾಪಾರ ಮಾಡುವಂತವರು ಭಯಭೀತರಾಗಿ ಯಾವತ್ತಾದರೂ ಬಿಡಿಎ ನವರು ಒಡೆಯಬಹುದು ಎಂದು ಅಲ್ಲಿಂದ ಖಾಲಿ ಮಾಡಿಕೊಂಡು ಹೋಗಿದ್ದಾರೆ. ಅದಕ್ಕೆ ಕೂಡಲೇ ಪರಿಹಾರ ಘೋಷಣೆ ಮಾಡಿ ಸೂಕ್ತವಾದ ಪರಿಹಾರ, ಇವತ್ತು ಏನು ಸುಪ್ರೀಂಕೋರ್ಟ್‌ನ ಆದೇಶದನ್ವಯ ಹಿಂದೆ ಕೇಂದ್ರ ಸರ್ಕಾರದಲ್ಲಿ ತಂದಿರುವಂತಹ ಆದೇಶದನ್ವಯ ಆ ಭಾಗದ ಜನರಿಗೆ ನ್ಯಾಯವಾಗಿ ಏನು ಪರಿಹಾರ ಕೊಡಬೇಕು ಎಂದು ಸೂಕ್ತವಾದ ಪರಿಹಾರವನ್ನು ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈಗಾಗಲೇ ಬೆಂಗಳೂರಿನಲ್ಲಿ, ರಾಜ್ಯದಲ್ಲಿ ಮಳೆ ಇಲ್ಲವೆಂದು ಅನ್ನುತ್ತಿದ್ದೆವು, ಈಗ ಮಳೆ ಪ್ರಾರಂಭವಾಗಿದೆ. ಬೆಂಗಳೂರು ನಗರದಲ್ಲಿ ಸಾಕಷ್ಟು ಮುಖ್ಯವಾದ ರಸ್ತೆಗಳನ್ನು ಸರ್ಕಾರ ಬಂದ ಮೇಲೆ ನನ್ನ ಕ್ಷೇತ್ರದಲ್ಲಿಯೂ ತೆಗೆದುಕೊಂಡಿದೆ, ಕೆಲಸಗಳು ನಡೆಯುತ್ತಿದೆ. ಇನ್ನು ಕೆಲವು ಭಾಗದಲ್ಲಿ ರಸ್ತೆಗಳು ಆಗಿಲ್ಲ. ಇತ್ತೀಚೆಗೂ ಸಹ ಮಾನ್ಯ ಮುಖ್ಯಮಂತ್ರಿಗಳು ವಿವೇಕಾನಂದ ಕಾಲೇಜಿನ ಹತ್ತಿರ Soap Factory junction ನಲ್ಲಿ under pass ನಿರ್ಮಾಣ ಕಾಮಗಾರಿಗೆ ಸಂಬಂಧಪಟ್ಟ ಸಚಿವರು, ಮೇಯರ್‌ರವರು ಬಂದು ಅಲ್ಲಿ ಪ್ರಾರಂಭ ಮಾಡಿದರು. ಅಲ್ಲಿ

ಒಂದು Christian Missionary Hospital ಇದೆ. ಇನ್ನು ಆ ಜಾಗ ಬಿಟ್ಟು ಕೊಟ್ಟಿಲ್ಲ. ಆ ಜಾಗ ಬಿಟ್ಟು ಕೊಟ್ಟರೆ ಕೆಲಸ ಪ್ರಾರಂಭವಾಗುತ್ತದೆ. ಇಲ್ಲವೆಂದರೆ ನಿಧಾನವಾಗಿ ಆ ಭಾಗದ ಜನರಿಗೆ ತೊಂದರೆ ಆಗುತ್ತದೆ. ಆ ಕೆಲಸವನ್ನು ಸಹ ತುರ್ತಾಗಿ ಆಗಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ನಗರದಲ್ಲಿ ಮಳೆ ಪ್ರಾರಂಭವಾಗಿ ಗುಂಡಿ ಬಿದ್ದಿರತಕ್ಕಂಥದ್ದು ತಾವು ಓಡುತ್ತಿರಬೇಕಾದರೆ ಎಲ್ಲಾ ಭಾಗದಲ್ಲಿಯೂ ಗುಂಡಿಗಳು ಬಿದ್ದು ಜನ ಓಡಾಡುವುದಕ್ಕೆ ಮಳೆ ಬಿದ್ದಂಥ ಸಂದರ್ಭದಲ್ಲಿ ಬಹಳ ತೊಂದರೆ ಆಗಿದೆ. ಆ ಗುಂಡಿಗಳನ್ನು ಮುಚ್ಚತಕ್ಕಂಥ ಕೆಲಸವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ನೀವು ಆದೇಶ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಜೊತೆಗೆ ಕಸದ ಸಮಸ್ಯೆ ಏನಿದೆ, ಮೇ–1ನೇ ತಾರೀಖಿನೊಳಗೆ ಬೆಂಗಳೂರಿನ ಕಸವನ್ನು ಮಂಡೂರಿಗೆ ಹಾಕಬಾರದು ಎಂದು ಕೋರ್ಟಿನ ಆದೇಶ ಸಹ ಆಗಿದೆ. ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಸಹ ಇದರ ಬಗ್ಗೆ ಕಾಳಜಿವಹಿಸಿ ಮಾಡಿದ್ದಾರೆ. ಈಗ ತುರ್ತಾಗಿ ನನ್ನ ಭಾಗದಲ್ಲಿರತಕ್ಕಂಥ ಒಂದು APMC market ಏನಿದೆ, ಮಹಾನಗರ ಪಾಲಿಕೆಗೆ 2 ಕೋಟಿ ರೂ.ಗಳಿಗಿಂತ ಹೆಚ್ಚಿನ ಟ್ಯಾಕ್ಸ್ ಅನ್ನು ಕಟ್ಟುತ್ತಿದ್ದಾರೆ. ಅಲ್ಲಿ ಒಳಗಡೆ ಇರತಕ್ಕಂಥ ಕಸವನ್ನು ಮಹಾನಗರ ಪಾಲಿಕೆ ಅಲ್ಲಿಂದ ಕಸ ಎತ್ತುತ್ತಿಲ್ಲ. ಅಲ್ಲಿ ಕೂಲಿನಾಲಿ ಮಾಡತಕ್ಕಂಥವರು ನನ್ನ ಕ್ಷೇತ್ರ ಸುತ್ತಮುತ್ತಲಿನಿಂದ ಬರತಕ್ಕಂಥವರು. APMC market ಗೆ ಇಡೀ ರಾಜ್ಯದಿಂದ ಬರತಕ್ಕಂಥ ರೈತರಿಗೆ ಅಲ್ಲಿ ಉಳಿದುಕೊಳ್ಳುವುದಕ್ಕೆ ಸೂಕ್ತವಾದ ಒಂದು ವ್ಯವಸ್ಥೆಯನ್ನು ಮಾಡಿಲ್ಲ. ಅಲ್ಲಿ ಡೆಂಗ್ಯೂ ಜ್ವರ ಪ್ರಾರಂಭವಾಗಿದೆ. ಆದ್ದರಿಂದ ಇದರಲ್ಲಿ ಸರ್ಕಾರ ಮಧ್ಯೆ ಪ್ರವೇಶ ಮಾಡಿ APMC market ನಲ್ಲಿ ಬರತಕ್ಕಂಥ ರೈತರಿಗೆ ಜೊತೆಗೆ ಅಲ್ಲಿ ಕೂಲಿ ಕೆಲಸ ಮಾಡತಕ್ಕಂಥವರಿಗೆ ಸಹಾಯ ಮಾಡಬೇಕೆಂದು ನಾನು ವಿನಂತಿ ಮಾಡುತ್ತೇನೆ. ವೃಷಭಾವತಿ ನಾಲೆ ನನ್ನ ಕ್ಷೇತ್ರದ ಭಾಗದಿಂದ ಹಾದು ಹೋಗುತ್ತದೆ. ಹೋದ ವರ್ಷ ಮಳೆ ಬಿದ್ದಂಥ ಸಂದರ್ಭದಲ್ಲಿ ಅನೇಕ ಗೋಡೆಗಳು ಬಿದ್ದಿರುವುದನ್ನು ತಾವು ಬಂದಂಥ ಸಂದರ್ಭದಲ್ಲಿ ತಮಗೂ ತೋರಿಸಿರುತ್ತೇನೆ. ಇವತ್ತಿಗೂ ಸಹ ಹೂಳೆತ್ತುವ ಕೆಲಸವನ್ನು ಮಳೆಗಾಲ ಪ್ರಾರಂಭವಾದರೂ ಸಹ ಮಾಡಿಲ್ಲ. ವೃಷಭಾವತಿ

ನಾಲೆ ನನ್ನ ಕ್ಷೇತ್ರದಲ್ಲಿ ಅಷ್ಟೆ ಅಲ್ಲ, ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರತಕ್ಕಂಥ ಯಾವ್ಯಾವ ದೊಡ್ಡ ದೊಡ್ಡ ನಾಲೆಗಳು ಹೋಗುತ್ತವೆ ಅಲ್ಲಿ ಹೂಳು ಎತ್ತತಕ್ಕಂಥ ಕೆಲಸ ಪ್ರಾರಂಭವಾಗಿಲ್ಲ. ಒಂದು ಸಲ ಮಳೆ ಬಿದ್ದರೆ ಮೊನ್ನೆ ಮಳೆ ಬಿದ್ದಂಥ ಸಂದರ್ಭದಲ್ಲಿ ನನ್ನ ಕ್ಷೇತ್ರದಲ್ಲಿ ಒಂದು ಸಾವು ನೋವು ಆಯಿತು. ಸುಮಾರು 70–80 ಮನೆಗಳಿಗೆ ನೀರು ನುಗ್ಗಿತು. ನೀರು ನುಗ್ಗತಕ್ಕಂಥ ಸಂದರ್ಭದಲ್ಲಿ ಮಹಾನಗರ ಪಾಲಿಕೆಯಿಂದ ಕಣ್ಣೊರೆಸತಕ್ಕಂಥ ಒಂದು ಸಾವಿರ ರೂ.ಗಳನ್ನು ಕೊಟ್ಟರೆ ಏನು ಆಗುವುದಿಲ್ಲ. ಶಾಶ್ವತವಾದ ಪರಿಹಾರದ ಕೆಲಸವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ಹತ್ತಿರವಾಗಿ ಕೆಂಪೇಗೌಡ ಬಡಾವಣೆಯನ್ನು ನಿರ್ಮಾಣ ಮಾಡತಕ್ಕಂಥದ್ದು ಇದು ಪ್ರಮುಖವಾದ ವಿಚಾರ. ಇದಕ್ಕೆ ಸರ್ಕಾರ ಕೈಹಾಕಿ ಟೆಂಡರ್ ಕರೆದಿದೆ. ಆ ಟೆಂಡರ್‌ನಲ್ಲಿ ಕೋಟ್ಯಾಂತರ ರೂ.ಗಳ ಅವ್ಯವಹಾರ ನಡೆದಿದೆ. ಟೆಂಡರ್ ಹಾಕತಕ್ಕಂಥ ಸಂದರ್ಭದಲ್ಲಿ qualification ಇಲ್ಲವೆಂದು ಸುಳ್ಳು ದಾಖಲೆ ಕೊಟ್ಟು ಕೊಟ್ಯಾಂತರ ರೂ.ಗಳ ಕೆಲಸ ಮಾಡಿರತಕ್ಕಂಥದ್ದು ಇವತ್ತು ಸಾಬೀತಾಗಿದೆ. ಸಾಬೀತಾದರೂ ಸಹ ಈ ಕೆಂಪೇಗೌಡ ಬಡಾವಣೆಯಲ್ಲಿ ಇಬ್ಬರು ಅಧಿಕಾರಿಗಳು ಸೇರಿ ಲೋಕಾಯುಕ್ತರಿಂದ ರೇಡ್ ಆದರೂ ಸಹ 4–5 ವರ್ಷದಿಂದ ಅವರು ಅಲ್ಲಿಯೇ ಜಾಂಡಾ ಹೂಡಿದ್ದಾರೆ. ಇಬ್ಬರು ಅಧಿಕಾರಿಗಳು ಸೇರಿ ಒಬ್ಬ ಕಂಟ್ರಾಕ್ಟರಿಗೆ ಅನುಕೂಲ ಮಾಡಿಕೊಡತಕ್ಕಂಥ ದೃಷ್ಟಿಯಲ್ಲಿ ನೂರಾರು ಕೋಟಿ ರೂ.ಗಳ ಅವ್ಯವಹಾರ ಕೆಂಪೇಗೌಡ ಬಡಾವಣೆಯಲ್ಲಿ ನಡೆದಿದೆ. ದಯಮಾಡಿ ಒಂದು ಸದನ ಸಮಿತಿಯನ್ನು ರಚನೆ ಮಾಡಿ ಅಲ್ಲಿ ನಡೆದಿರತಕ್ಕಂಥ ಅವ್ಯವಹಾರ ಏನಿದೆ ಅದನ್ನು ಬಯಲಿಗೆಳೆಯಬೇಕು. ಯಾರು ಅರ್ಹತೆ ಇಲ್ಲದೆ ಕೆಲಸವನ್ನು ಕೊಟ್ಟುಕೊಂಡು ಅವರನ್ನು ರಕ್ಷಣೆ ಮಾಡಿಕೊಂಡು ಬಂದಿರುತ್ತಾರೆ. ಈ ಅಧಿಕಾರಿಗಳ ಕಾಲದಲ್ಲಿ ಯಾವ್ಯಾವ ಕೆಲಸ ನಡೆದಿದೆ, ಅಲ್ಲಿ ಗುಂಡಿ ಇಲ್ಲ, ಗುಡ್ಡಗಳು ಇಲ್ಲದಿದ್ದರೂ ಅಲ್ಲಿ ಗುಂಡಿ ಇದೆ, ಗುಡ್ಡ ಇದೆ ಅದನ್ನು ಮಟ್ಟ ಮಾಡಿಸುವುದಕ್ಕೆ 1–2 ಕೋಟಿ ರೂ.ಗಳು ಅಲ್ಲ, ಅಲ್ಲಿ ನೂರಾರು ಕೋಟಿ ರೂ.ಗಳ ಅವ್ಯವಹಾರ

ನಡೆದುಕೊಂಡು ಆ ಅಧಿಕಾರಿಗಳ ಕಾಲದಿಂದ ಬರುತ್ತಿದೆ. ಅವರ ಮೇಲೆ ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಈ ಮೂಲಕ ತಮ್ಮನ್ನು ಒತ್ತಾಯ ಮಾಡುತ್ತೇನೆ. ಮಾನ್ಯ ಉಪಾಧ್ಯಕ್ಷರೆ, ಕೊನೆಯದಾಗಿ ಒಂದೇ ವಿಷಯ ಇರುತ್ತದೆ. ವಸತಿ ಯೋಜನೆ ಅಡಿಯಲ್ಲಿ ಬೆಂಗಳೂರಿನಲ್ಲಿರತಕ್ಕಂಥ ಸ್ಲಂನಲ್ಲಿ ಕಡುಬಡವರಿಗೆ ಮನೆಗಳನ್ನು ಕೊಡತಕ್ಕಂಥ ಪ್ರಸ್ತಾವನೆಯನ್ನು ಜನವರಿಯಲ್ಲಿ ನೀವು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿರಿ. ಅದು ಏನಾಯಿತು ಎಂದು ಮಾನ್ಯ ವಸತಿ ಸಚಿವರು ತಿಳಿಸತಕ್ಕಂಥ ಕೆಲಸವನನು ಮಾಡಬೇಕು. ನನ್ನ ಕ್ಷೇತ್ರದಲ್ಲಿ ಸುಮಾರು 23 ಸ್ಲಂ ಗಳು ಬರುತ್ತವೆ. ಕಮಲಾನಗರ ಒಂದರಲ್ಲಿಯೇ ಸುಮಾರು 95 ಎಕರೆಯಲ್ಲಿ ಬಡವರಿಗೆ ಕೊಟ್ಟಿರತಕ್ಕಂಥ ಉಚಿತವಾದ ಸೈಟ್‌ಗಳು ಇವೆ. ಆ ಜನ ತೀರಾ ಬಡ ಕುಟುಂಬದಿಂದ ಬಂದಿರತಕ್ಕಂಥವರು. ಸನ್ಮಾನ್ಯ ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಆ ಭಾಗದ ಜನರಿಗೆ ಉಚಿತವಾಗಿ ನಿವೇಶನಗಳನ್ನು ಕೊಟ್ಟಿದ್ದರು. ಆ ಯೋಜನೆಯಲ್ಲಿ ಬೆಂಗಳೂರಿನಲ್ಲಿರತಕ್ಕಂಥ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಎರಡು ಬಡಾವಣೆಯಲ್ಲಿ ಎಂ.ಜಿ. ಜನಗೆ ಎಂದು ಒಂದು ಸ್ಲಂ ನನ್ನ ಬಡಾವಣೆಯಲ್ಲಿ ಇದೆ, ಭೋವಿಪಾಳ್ಯ ಎಂದು ಇದೆ. ಆ ಭಾಗದಲ್ಲಿ ಸುಮಾರು 50 ವರ್ಷದಿಂದ ವಾಸ ಮಾಡಿಕೊಂಡು ಬರುತ್ತಿದ್ದಾರೆ, ಅವರಿಗೆ ಗುರುತಿನ ಚೀಟಿ ಕೊಟ್ಟಿದ್ದೇವೆ, ವೋಟರ್ ಲಿಸ್ಟ್ ಇದೆ, ಎಲೆಕ್ಟ್ರಿಕ್ ಸಂಪರ್ಕ ಕೊಟ್ಟಿದ್ದೇವೆ, ಅವರಿಗೆ ಹಕ್ಕುಪತ್ರ ಕೊಡತಕ್ಕಂಥ ವ್ಯವಸ್ಥೆಯನ್ನು ಸನ್ಮಾನ್ಯ ನಗರಾಭಿವೃದ್ಧಿ ಸಚಿವರನ್ನು ವಿನಂತಿ ಮಾಡಿ ಕೇಳೀಕೊಳ್ಳುತ್ತಿದ್ದೇನೆ. ತಾವು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ಧನ್ಯವಾದಗಳು.

ಡಾ॥ ವಿಶ್ವನಾಥ ಈರನಗೌಡ ಪಾಟೀಲ್ (ಬೈಲಹೊಂಗಲ):- ಮಾನ್ಯ ಅಧ್ಯಕ್ಷರೆ, ಇವತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಬೇಡಿಕೆಗಳ ಬಗ್ಗೆ ಮಾತನಾಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇವತ್ತು ಅಂಗನವಾಡಿ ಸ್ಥಿತಿಗತಿಯ ಬಗ್ಗೆ

ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಮ್ಮ ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಂಥ ಅಂಗನವಾಡಿ ಕೇಂದ್ರಗಳಲ್ಲಿ ಬಹುತೇಕ ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳು ಇಲ್ಲ. ಬಾಡಿಗೆ ಅಥವಾ ದಾನಿಗಳು ಕೊಟ್ಟಿರತಕ್ಕಂಥ ಕಟ್ಟಡಗಳಲ್ಲಿ ಆ ಕೇಂದ್ರಗಳು ನಡೆಯುತ್ತಿವೆ. ಆ ಕಟ್ಟಡಗಳಲ್ಲಿ ಬಹುತೇಕವಾಗಿ ಶೌಚಾಲಯಗಳ ವ್ಯವಸ್ಥೆ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಸುಸಜ್ಜಿತವಾದ ಒಂದು ಅಡುಗೆಯ ಮನೆ ವ್ಯವಸ್ಥೆ ಇಲ್ಲ. ಅಲ್ಲಿ ಇನ್ನು ಅನೇಕ ತೊಂದರೆಗಳು ಇವೆ. ಅಲ್ಲಿ ಇದ್ದಂಥ ಅಂಗನವಾಡಿ ಕಾರ್ಯಕರ್ತೆಯರು ಇವತ್ತು ಅವರ ಕೆಲಸ ಏನೆಂದರೆ, ಮಗುವಿನ ಆರೋಗ್ಯ ಮತ್ತು ಅಭೀವೃದ್ಧಿ ಕಡೆ ಹೆಚ್ಚು ಗಮನಹರಿಸಬೇಕಾದ ಮುಖ್ಯ ಭಾಗ. ಅವರು ಇನ್ನು ಸ್ತ್ರೀಗರ್ಭಧರಿಸಿದ ದಿನದಿಂದ ಹಿಡಿದು ಜನನದವರೆಗೆ ಮತ್ತು ನಂತರದ ಎದೆ ಹಾಲಿಗೆ ಪ್ರಾಮುಖ್ಯತೆ, ಪೋಲಿಯೋ, ಲಸಿಕೆ ಮತ್ತು ಚುಚ್ಚುಮದ್ದು, HIV ಬಗ್ಗೆ ಹೆಚ್ಚಿನ ಮಾಹಿತಿ ಇತ್ಯಾದಿಗಳ ಬಗ್ಗೆ ಗಮನಹರಿಸುವಂಥ ಕೆಲಸವನ್ನು ಮಾಡಬೇಕು. ಆದರೆ ಅವರು ಮಾಡುವಂಥ ಕೆಲಸ ಎಂದರೆ, ಇವತ್ತು ಜಾತಿ ಹಾಗೂ ಜಾನುವಾರುಗಳ ಜನಗಣತಿ, ಚುನಾವಣೆಯ ಕೆಲಸ ಸ್ತ್ರೀಶಕ್ತಿ ಸಂಘ, ಕಿಶೋರಿಯರಿಗೆ ಮಾಹಿತಿ ನೀಡುವಂಥ ಮುಂತಾದ ಮಕ್ಕಳ ಅಭಿವೃದ್ಧಿಯೇತರ ಕಾರ್ಯಗಳ ಜೊತೆಗೆ ಆರೋಗ್ಯ ಮತ್ತು ಶೈಕ್ಷಣಿಕ ಚಟುವಟಿಕೆಗಳತ್ತ ಗಮನ ನೀಡುವುದು ಅವರಿಗೆ ಕಷ್ಟಸಾಧ್ಯವಾಗುತ್ತಿದೆ. ಇವತ್ತು ಅಂಗನವಾಡಿ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವಂಥ ಕಾರ್ಯಕರ್ತೆಯರಿಗೆ ಸರಿಯಾದ ಸಂಬಳವಿಲ್ಲ. ಅವರಿಗೆ ಪಿಂಚಣಿ ವ್ಯವಸ್ಥೆ ಇಲ್ಲ. ಸೇವಾ ಭದ್ರತೆ ಇಲ್ಲ. ಇಂತಹ ಪರಿಸ್ಥಿತಿಯೊಳಗೆ ಅವರು ಕೆಲಸ ಮಾಡುವುದು ನಿಜವಾಗಿಯೂ ಕಷ್ಟಸಾಧ್ಯವಾಗುತ್ತಿದೆ. ಈ ಒಂದು ವ್ಯವಸ್ಥೆ ಇರುವುದರಿಂದ ಅಂಗನವಾಡಿಯಲ್ಲಿ ಇದ್ದಂಥ ಮಕ್ಕಳಿಗೆ ಸರಿಯಾದ ಪೌಷ್ಠಿಕ ಆಹಾರ ಸಿಗುತ್ತಿಲ್ಲ. ಮಾನ್ಯ ಮಂತ್ರಿಗಳು ನಮಗೆ ಒಂದು ವರದಿಯನ್ನು ಕೊಡಬೇಕಾಗುತ್ತದೆ. ಅಪೌಷ್ಠಿಕ ಮಕ್ಕಳು ಹೆಚ್ಚು ಆಗುತ್ತಿದ್ದಾರೆ. ಅಲ್ಲಿ ಗ್ರೇಡ್ 1,2,3, ಎಂದು malnutrition child ಎಂದು ಮೂರು ಗ್ರೇಡ್‌ಗಳನ್ನು ಅಲ್ಲಿ ಮಾಡುತ್ತಿದ್ದಾರೆ. ಗ್ರೇಡ್ 1,2 ಮಕ್ಕಳಿಗೆ ಸರಿಯಾದ ಒಂದು ಚಿಕಿತ್ಸೆ ಕೊಡುತ್ತಿಲ್ಲ.

ಗ್ರೇಡ್, 3ಗೆ ಹೋದ ಮೇಲೆ ಆ ಸರ್ಕಾರಿ ದವಾಖಾನೆಯಲ್ಲಿ ಚಿಕಿತ್ಸೆಯನ್ನು ಕೊಡುವಂಥದ್ದು ಮತ್ತು ಅವರಿಗೆ ಒಂದು ಊಟದ ವ್ಯವಸ್ಥೆ ಮಾಡುವಂಥದ್ದು ಅಲ್ಲಿ ಇದೆ. ಆದರೆ ಗ್ರೇಡ್ 1,2 ಮಕ್ಕಳಿಗೆ ಕೊಡುತ್ತಿಲ್ಲ. ಗ್ರೇಡ್–1 ಹೋಗುವ ಮಗುವಿಗೆ ನಾವು ಸರಿಯಾದ ಚಿಕಿತ್ಸೆಯನ್ನು ಕೊಟ್ಟು ಅವರಿಗೆ ವ್ಯವಸ್ಥಿತವಾಗಿ ಊಟವನ್ನು ಕೊಟ್ಟರೆ ಗ್ರೇಡ್ 3ಗೆ ಹೋಗುವುದನ್ನು ತಡೆಯಲಿಕ್ಕೆ ಸಾಧ್ಯವಿದೆ. ಅದಕ್ಕಾಗಿ ಆ ಒಂದು ವ್ಯವಸ್ಥೆ ಆಗಬೇಕು. ಇವತ್ತು ಹಳ್ಳಿಗಳಲ್ಲಿ ಮಕ್ಕಳಿಗೆ ಸರಿಯಾಗಿ ಆಹಾರ ಪದಾರ್ಥಗಳನ್ನು ಕೊಡದೆ ಅಪೌಷ್ಠಿಕತೆಯಿರುವ ಪದಾರ್ಥಗಳನ್ನು ಕೊಡುತ್ತಿದ್ದಾರೆ. ಆದುದರಿಂದ ಪೌಷ್ಠಿಕತೆಯಿಂದಿರುವ ಒಳ್ಳೆಯ ಪದಾರ್ಥಗಳನ್ನು ಕೊಟ್ಟು ಅವರಿಗೆ ಸರಿಯಾದ ಊಟದ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಜಗದೀಶ್ ಕುಮಾರ್ (ಹೆಬ್ಬಾಳ):– ಸನ್ಮಾನ್ಯ ಉಪಾಧ್ಯಕ್ಷರೆ, ನಾನು ಸದಸ್ಯನಾಗಿ ಚುನಾಯಿತನಾಗಿ ಒಂದು ವರ್ಷ ಒಂದು ತಿಂಗಳಾದ ಮೇಲೆ ಕ್ಷೇತ್ರದಲ್ಲಿ ಎಲ್ಲಾ ಜನ ನನ್ನನ್ನು DDMLA ಎಂದು ಹೇಳುವುದಕ್ಕೆ start ಮಾಡಿದ್ದರು, ಅಂದರೆ Deaf and Dumb ಎಂದು. ಏಕೆಂದರೆ ನಾನು ಮಾತನಾಡುತ್ತಿಲ್ಲ. ನಾನು ಮಾತನಾಡುವುದು ಯಾರಿಗೂ ಗೊತ್ತಾಗುವುದಿಲ್ಲ. ಇವತ್ತು ಒಂದು ಕಡೆ ಸಂತೋಷ, ದುಃಖ ಎರಡೂ ಆಗುತ್ತಿದೆ. ಯಾರು ಪತ್ರಿಕಾ ಮಾಧ್ಯಮದವರು ಇಲ್ಲ, ನಾನು ಮಾತನಾಡಿದ್ದನ್ನು ನೀವು ಕೇಳಿಸಿಕೊಳ್ಳಬೇಕು, ಅಲ್ಲಿ ರೆಕಾರ್ಡ್‌ಗೆ ಹೋಗಬೇಕು, ಆ ರೆಕಾರ್ಡ್ ಅನ್ನು ತೆಗೆದು ಎಲ್ಲರಿಗೂ ನಾನು ಮಾತನಾಡಿರುವ ಬಗ್ಗೆ ತೋರಿಸಬೇಕು. ಆದರೂ ಸಹ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಮೊದಲನೇ ಬಾರಿಗೆ ಅಬಕಾರಿ ಸಚಿವರು ಬಂದಾಗ ನಾನು Sir I would like to speak on Excise, Please stay ಎಂದು request ಮಾಡಿ ಒಂದು letter ಕಳುಹಿಸಿದೆ. ನನಗೆ ಗೊತ್ತಿರುವ ಹಾಗೆ ಅಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ಯಾರು ಇರುವುದಿಲ್ಲ. ಸಮಯವಾಯಿತು ಎಂದು ಹೊರಟು ಹೋಗಿರುತ್ತಾರೆ. ಸಚಿವರು ಇದ್ದಾರೆ, ಸರ್ ತಾವು ನೋಟ್ ಮಾಡಿಕೊಳ್ಳದಿದ್ದರೂ ಪರವಾಗಿಲ್ಲ

ನಾನು ಇವತ್ತು ಮಾತನಾಡಿದ್ದನ್ನು ಲೆಟರ್ ರೂಪದಲ್ಲಿ ಮಾಡಿ ಕೊಡುತ್ತೇನೆ, ತಾವು ಅದನ್ನು incorporate ಮಾಡಿಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಎಂ. ಅಶೋಕ್:– ಸ್ವಾಮಿ ಅಬಕಾರಿಯ ವಿಷಯ ಏನಿದ್ದರೂ 5.00 ಗಂಟೆಯೊಳಗೆ ಮಾತನಾಡಬೇಕು. 5.00 ಗಂಟೆ ಮೇಲೆ ಅಬಕಾರಿಯವರು ಯಾರೂ ಸಿಗುವುದಿಲ್ಲ.

ಶ್ರೀ ಆರ್. ಜಗದೀಶ್ ಕುಮಾರ್:– ಈ ಅಬಕಾರಿ ಈಗ extend ಆಗಿದೆ. ಶುಕ್ರವಾರ, ಶನಿವಾರ ಮತ್ತು ಭಾನುವಾರ upto 01–00 o'clock ಎಂದು ಮಾಡಿದ್ದೇವೆ. Revenue target ನಮ್ಮ ಅಬಕಾರಿ ಇಲಾಖೆ ಹೇಗಾಗಿದೆ ಎಂದರೆ ; It contributes more than 15% of the total budget receipts, but it is not identified as a different department. ಅದಕ್ಕೆ ನೋಡಿ ಅಬಕಾರಿ ಎಂದು ಎಲ್ಲಿಯೂ ಇಲ್ಲ. ಆರ್ಥಿಕ ಇಲಾಖೆಯೊಳಗೆ ಸೇರಿಸಿಕೊಂಡುಬಿಟ್ಟಿದ್ದಾರೆ. ಅಂದರೆ ಇದಕ್ಕೆ ಒಬ್ಬರು ಮಂತ್ರಿಯಿದ್ದಾರೆ ಇದಕ್ಕೆ ಬೇರೆ ಇಲಾಖೆ ಇದೆ, 14,400 ಕೋಟಿ ರೂಪಾಯಿಗಳ ಟಾರ್ಗೆಟ್ ಈ ಬಾರಿ ಇದೆ. ಮತ್ತೆ ಇದು ಹೇಗೆಂದರೆ ಈ ಇಲಾಖೆ ಕಂಡರೆ ಒಂದು ರೀತಿ ಮಲತಾಯಿ ಧೋರಣೆ. ಎಲ್ಲರೂ ಪಾನ ವಿರೋಧ, ಪಾನ ನಿರೋಧ ಎಂದು ಹೇಳುತ್ತಿರುವುದು, 14,500 ಕೋಟಿ ಬರಬೇಕೆಂದೂ ಹೇಳಿ ಟಾರ್ಗೆಟ್ ಫಿಕ್ಸ್ ಮಾಡುವುದು. ಇದರ ಜೊತೆಗೆ ಈಗ ಶಿರಾ ಹತ್ತಿರ 65 ಎಕರೆ ಬಂದಿದೆ ಎಂದು ಹೇಳುತ್ತಿದ್ದಾರೆ. ನಾನು ಮಂತ್ರಿಗಳ ಹತ್ತಿರ ಕೇಳಿಕೊಳ್ಳುವುದು ಈ ಅವಧಿಯಲ್ಲಿ ಅಲ್ಲಿ ಒಂದು ಅಡಿಗಲ್ಲು ಹಾಕಿ ಒಂದು building ಮಾಡಿಸಿಬಿಡಿ ನಮ್ಮದೇ Excise Academy ಎಂದು ಇರುತ್ತದೆ. ಇಲ್ಲವಾದಲ್ಲಿ ಪ್ರತಿ ಬಾರಿ ಅಬಕಾರಿ ಇಲಾಖೆಯವರಿಗೆ training ಕೊಡಿಸಲಿಕ್ಕೆ ಮೈಸೂರಿನಲ್ಲಿರುವ ಅವರ ಅಕಾಡೆಮಿಯ ಪೊಲೀಸಿನವರಿಗೆ ಕೇಳಿಕೊಳ್ಳುವುದು. ಅವರು ಬೇರೆ ಯಾವುದೇ ಇಲಾಖೆಯವರು ಅವರನ್ನು ಕೇಳಿಕೊಳ್ಳದೆ ಇರುವ ಸಮಯದಲ್ಲಿ ನೀವು ಕಳುಹಿಸಿ ಎಂದು ಹೇಳುತ್ತಾರೆ. ಅಷ್ಟೊತ್ತಿಗೆ ಈ ಅಬಕಾರಿ ಇಲಾಖೆಯಲ್ಲಿ renewal time ಬಂದಿರುತ್ತದೆ. ನಮ್ಮ ಅಬಕಾರಿ ಇಲಾಖೆಯಲ್ಲಿ Renewal time is called as harvest time. ಇವರು ಯಾರು ಹೋಗುವುದಿಲ್ಲ, ಅವರು

ಬಿಡುವ ಹಾಗಿಲ್ಲ. ಆ ರೀತಿ ಆಗುತ್ತದೆ ಹಾಗಾಗಿ ನಮ್ಮದೇ ಒಂದು Academy ಮಾಡಿಕೊಂಡರೆ ಒಳ್ಳೆಯದು ಎಂದು ನನ್ನ ಸಲಹೆ. ಅಲ್ಲಿ approved posts 5404 ಇವೆ. ಈಗ vacant ಇರುವುದು 2694 posts. Almost 50% of the posts in Excise Department are vacant. ಅದಕ್ಕೊಂದು ನಾನು ಸಲಹೆಯನ್ನು ಕೊಡುತ್ತಿದ್ದೇನೆ. ಈ vacant ಇರುವ time ನಲ್ಲೇ re-organization ಮಾಡಿಬಿಡಿ. ನೀವು fill up ಮಾಡಿದ ಮೇಲೆ re-organisation ಮಾಡಬೇಕೆಂದರೆ ಕಷ್ಟವಾಗುತ್ತದೆ. ಈಗ 2015ಕ್ಕೆ ಸುಮಾರು 600 ಜನ retire ಆಗುತ್ತಾರೆ. ಅದೆಲ್ಲಾ ಲೆಕ್ಕ ತೆಗೆದುಕೊಂಡು ಒಂದೇ ಬಾರಿಗೆ re-organise ಮಾಡಿ, ಬೇಕಾದರೆ 5400 ಇರುವುದನ್ನು 4,000ಕ್ಕೆ ತಂದರೆ ಆಯಿತು. ಆಗ ನಮಗೆ ಎಷ್ಟು ಬೇಕೋ ಅಷ್ಟೇ vacant posts ತೆಗೆದುಕೊಳ್ಳುವಂಥ ಕೆಲಸ ಆಗುತ್ತದೆ. MSILಗೆ 2009 ರಲ್ಲಿ 463 ಅಂಗಡಿಗಳನ್ನು ಕೊಡಬೇಕೆಂದುಕೊಂಡಿದ್ದೆವು. ಇಲ್ಲಿಯವರೆಗೆ 387 ಅಂಗಡಿಗಳನ್ನು ಮಾತ್ರ ಕೊಟ್ಟಿರುವುದು. ಇನ್ನು 76 ಕೊಡಬೇಕು. ಅದನ್ನು ಏಕೆ ಕೊಡಲಿಕ್ಕಾಗುತ್ತಿಲ್ಲವೆಂದರೆ ಅಲ್ಲಿರುವ Wine Merchants ಲಾಭಿ ಮಾಡುತ್ತಾರೆ. ಮೊದಲನೆಯದಾಗಿ MSIL ನವರು ಹೋದರೆ ಅವರನ್ನು open ಮಾಡದಿರುವಂತೆ ನೋಡಿಕೊಳ್ಳುತ್ತಾರೆ. ಅಲ್ಲಿಗೂ ಅವರು open ಮಾಡಲಿಕ್ಕೆ ಹೋದರೆ ಅವರಿಗೆ ಅಂಗಡಿ ಸಿಗದಿರುವ ಹಾಗೆ ಮಾಡಿ ಅವರ ಮೇಲೆ objections ಹಾಕಿ ಅವರು ಅಂಗಡಿಯನ್ನು open ಮಾಡದಿರುವ ಹಾಗೆ ವ್ಯವಸ್ಥೆ ನಡೆಯುತ್ತಿದೆ. MSIL is a Government owned corporation. ಅದಕ್ಕಾಗಿ MSIL ಕೈಯಲ್ಲಿ ಈ ಒಂದು trade ಇದ್ದರೆ ಒಳ್ಳೆಯದು ಎಂದು ಒಂದು ಕಾಲದಲ್ಲಿ ಯೋಚನೆ ಮಾಡಿ ಕೊಟ್ಟಿರುವುದರಿಂದ ಈ 463 ಕೋಟಾವನ್ನು ಮಂತ್ರಿಗಳು ಈ ವರ್ಷದಲ್ಲಿ ಮುಗಿಸುವುದಕ್ಕೆ ಏನಾದರೂ ಒಂದು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ. ಇದೆಲ್ಲಕ್ಕಿಂಥ ಹೆಚ್ಚಾಗಿ ಆ CL-2 & CL-9 ಗೆ ಮೊದಲು shifting ಇರಲಿಲ್ಲ. 2009ರಲ್ಲಿ shifting ಗೆ ಬಿಟ್ಟೆವು. ಆ shifting ಬಿಡುವಂಥ ಸಂದರ್ಭದಲ್ಲಿ ಏನಾಯಿತು ಎಂದರೆ; ಸಿಟಿಯಿಂದ ಹಳ್ಳಿಗೆ ಹೋಗುವುದು, ಆದರೆ ಹಳ್ಳಿಯಿಂದ ಸಿಟಿಗೆ ಬರಬಾರದು ಎಂದು ಒಂದು

ಕಾಯ್ದೆ ಮಾಡಿದ್ದರು. ಈಗ ಅದೇನೂ ತೊಂದರೆ ಇಲ್ಲ. ಪ್ರತಿ ತಾಲ್ಲೂಕಿಗೆ ಕೋಟಾ ಫಿಕ್ಸ್ ಮಾಡಿ, ಆ ಕೋಟಾ ಅನ್ವಯ ಅವನು ಹಳ್ಳಿಯಿಂದ ಸಿಟಿಗಾದರೂ ಹೋಗಲಿ, ಸಿಟಿಯಿಂದ ಹಳ್ಳಿಗಾದರೂ ಬರಲಿ, within that taluk quota and District quota ದಲ್ಲಿ operate ಆಗುವ ರೀತಿ ಮಾಡಿದರೆ ಪ್ರತಿ ವರ್ಷ ಅದರಿಂದ shifting ಗೆ ಎರಡು ಬಾರಿ ದುಪ್ಪಟ್ಟು License Fee Collect ಮಾಡುತ್ತಿದ್ದೇವೆ. It is a approval of the Revenue to the Department. ಆದ್ದರಿಂದ shifting ಸುಲಭವಾಗುವ ಹಾಗೆ ಮಾಡಿ. Within that taluk ಆಗುವ ಹಾಗೆ ಮಾಡಿದರೆ ಇನ್ನೂ ಹೆಚ್ಚಿನ ಆದಾಯ ಬರುತ್ತದೆ. ಇದೆಲ್ಲದಕ್ಕಿಂತ ಇನ್ನೊಂದು ಸಂಗತಿಯನ್ನು ನಾನು ಹೇಳುವುದಕ್ಕೆ ಇಚ್ಛಿಸುತ್ತೇನೆ. Excise quota fix ಆಗಿದ್ದು 2003ರಲ್ಲಿ. ಆ ಸಂದರ್ಭದಲ್ಲಿ 1993ರ ಜನಸಂಖ್ಯೆಯಾಧಾರದ ಮೇಲೆ fix ಮಾಡಿದ್ದಾರೆ. ಆ ಸಂದರ್ಭದಲ್ಲಿ reservation ಮಾಡಿಲ್ಲ. ಅದರಿಂದೇನಾಗಿದೆ ಎನ್ನುವುದಕ್ಕೆ ನಾನು ಪ್ರಶ್ನೆ ಹಾಕಿ ಉತ್ತರ ತರಿಸಿದ್ದೇನೆ. ಇವತ್ತಿನ ದಿವಸ ಇಡೀ ರಾಜ್ಯದಲ್ಲಿ 4500 ಲೈಸೆನ್ಸ್ ಇದ್ದರೆ ಅನುಸೂಚಿತ ಜಾತಿಯವರ ಬಳಿ 56, ಅನುಸೂಚಿತ ಪಂಗಡದವರ ಬಳಿ 46 ಇದೆ. ಅಂದರೆ ಅಲ್ಲಿ SC/ST quota operate ಆಗಿಲ್ಲ. ಈಗ ನಾನು ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ; ಈ ಇಲಾಖೆಯವರು ನಮಗೆ quota fix ಮಾಡುವುದನ್ನು stop ಮಾಡಿಬಿಟ್ಟಿದ್ದಾರೆಂದು ಹೇಳುತ್ತಾರೆ. ಆದರೆ quota fix ಮಾಡುವುದಕ್ಕೆ ಎಲ್ಲಿಯೂ stop ಕೊಟ್ಟಿಲ್ಲ. ಆಗ ನಮ್ಮ ಸರ್ಕಾರದವರು ಏನು ಹೇಳಿದ್ದಾರೆಂದರೆ ನೀವು ಇನ್ನು ಮೇಲೆ ಹೊಸ ಲೈಸೆನ್ಸ್ ಕೊಡಬೇಡಿ, ಹೊಸ ಲೈಸೆನ್ಸ ಕೊಡುವುದಕ್ಕೂ ಮೊದಲು ಸರ್ಕಾರವನ್ನು ಕೇಳಿಕೊಡಿ ಎಂದು 2003ರಲ್ಲಿ ಪತ್ರ ಬರೆದಿದ್ದಾರೆ. ಇವರು quota ಮಾಡಬೇಡಿ ಎಂದು ಹೇಳಿದ್ದಾರೆ. ಆ quota ಬಗ್ಗೆ ಒಂದೇ ಒಂದು ಸಣ್ಣ Section ಇದೆ ಉಪಾಧ್ಯಕ್ಷರೆ, Rule 12 Number of licenses to be fixed. Maximum number of licenses to be granted in area shall be determined from time to time by the Excise Commissioner with the previous approval of the State Government ಎಂದು ಇದೆ. ಅದರ ಜೊತೆಯಲ್ಲಿ One Retail License

for every 7,500 Urban Population and one retail license for every 15,000 rural population ಎಂದು ಇದೆ. ಅದಕ್ಕೆ ನಾನು ತಮ್ಮಲ್ಲಿ ವಿನಂತಿಸುವುದೇನೆಂದರೆ; 2011 ರ ಜನಗಣತಿ ನಮಗೆ ಬಂದಿದೆ. ದಯವಿಟ್ಟು ಆ Population ನೀವು quota ನಿಗದಿಪಡಿಸಿ. ಅದನ್ನು ಕೊಡುವುದು, ಬಿಡುವುದು ಬೇರೆ, quota ನಿಗದಿಪಡಿಸಿ. ಆಗ ಸಾಕಷ್ಟು bottlenecks ಇರುವ ಕಡೆ ಈ quota open ಆಗುತ್ತದೆ. ಎಷ್ಟು ಅಂಗಡಿ ಬೇಕಾಗುತ್ತದೋ ಅಷ್ಟು ಅಂಗಡಿಯನ್ನು ಇಡಬಹುದು. ಮತ್ತೆ ಈಗ ಯಾವುದೇ ಸರ್ಕಾರವಿರಲಿ, ಈ Excise License ಕೊಡಬೇಕು. ಇದರಿಂದ 14,500 ಕೋಟಿ ರೂಪಾಯಿಗಳ income ಬರಬೇಕು. No government will have the courage to make a statement on the Floor of the House that we do not want Excise Income, they want excise income, bt they do not want to open number of outlets. ಅದಕ್ಕೆ ನಾನು ಕೇಳಿಕೊಳ್ಳುವುದು SC/ST ಜನಕ್ಕೆ ಯಾವ ಒಂದು constitutional rights ಇತ್ತು, ಅದನ್ನು ಬ್ಯಾಕ್ ಲಾಗ್ ಎಂದು ಲೆಕ್ಕ ಹಾಕಿಕೊಂಡು ಈ ಕೊಟಾ ಮರು ನಿಗದಿ ಆದ ಮೇಲೆ 1500 ಲೈಸೆನ್ಸ್ ಪ್ರತಿ ಜಿಲ್ಲೆಗೆ ಕೊಟ್ಟು ಬಿಟ್ಟರೆ ಅದೇನು ಹೊಸ ಲೈಸೆನ್ಸ್ ಕೊಟ್ಟ ಹಾಗೆ ಆಗುವುದಿಲ್ಲ. ಆ ವರ್ಗಕ್ಕೆ ಸೇರಬೇಕಾದಂಥ ಹಕ್ಕು ಏನಿತ್ತು, ಅದನ್ನು ನಾವು ಅವರಿಗೆ ಏನೂ ಕೊಟ್ಟಿರಲಿಲ್ಲ, ಅದನ್ನು ಬ್ಯಾಕ್‌ಲಾಗ್ ರೀತಿ ಲೆಕ್ಕ ಹಾಕಿ ಕೊಟ್ಟುಬಿಟ್ಟರೆ ಈಗ ಬರುತ್ತಿರುವ 14,500 ಕೋಟಿ ರೂಪಾಯಿಗಳಿಗೆ ಬದಲು 16,000 ಕೋಟಿ ರೂಪಾಯಿಗಳು ಬರುತ್ತದೆ. ಹೇಗೆ ಬರುತ್ತದೆ?

Sri K. Shivamurthy:- Please tell me cut off date for backlog.

ಶ್ರೀ ಆರ್. ಜಗದೀಶ್ ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ಬ್ಯಾಕ್‌ಲಾಗ್ ಏಕೆ ಆಯಿತೆಂದರೆ The quota was fixed in 2003 with reference to the population of 1993. My only submission is; you first fix the quota as per the 2011 Census and then as per 2003 cut off itself, you calculate backlog and give. 1500 extra licenses will be there. 1500 ಲೈಸೆನ್ಸ್ ಕೊಟ್ಟ ಮೇಲೆ 14,500 ರೂಪಾಯಿಗಳಿರುವುದು 16,500-00 ರೂಪಾಯಿಗಳು

ಹೇಗಾಗುತ್ತದೆ ಎಂದು ಮೊನ್ನೆ ಮುಖ್ಯಮಂತ್ರಿಗಳು ಒಂದು ಸಭೆಯಲ್ಲಿ ಕೇಳಿದರು, ಹೇಗಾಗುತ್ತದೆಂದರೆ ಈಗ ಅಂಗಡಿಗಳಲ್ಲಿ ಕೆಲವು ಕಡೆ ಸಿಗುತ್ತಿಲ್ಲ. ಏಕೆ ಆ ರೀತಿ ಆಯಿತು ಎಂದರೆ 11000 Arrack shops ಇತ್ತು. 4 ಸಾವಿರ illegal bunk shops ಇತ್ತು. 15 ಸಾವಿರ ಅಂಗಡಿಗಳನ್ನು ನಾವು arrack ಜೊತೆಗೆ ಅಂಗಡಿಗಳನ್ನೂ ಸಹ ನಾವು ban ಮಾಡಿಬಿಟ್ಟೆವು. ಆದರೆ ಆ revenue ನಮಗೆ ಬರುತ್ತಿದೆ. ಏಕೆಂದರೆ, ಈಗ ಪ್ರತಿಯೊಬ್ಬರೂ ಸಹ ಕುಡಿಯುತ್ತಿರುವುದು Indian Made Liquor. ಅದಕ್ಕಾಗಿ ಈ quota open ಮಾಡಿಕೊಂಡು SC/ST ಗಳಿಗೆ ಅವರ backlog ಕೊಟ್ಟರೆ ಸುಮಾರು 1500 ಕೋಟಿ ರೂ.ಗಳು ಹೇಗೆ ಬರುತ್ತವೆ ಎಂದರೆ, ಈಗ ಅಂಗಡಿಯಲ್ಲಿ 45 ರೂ.ಗಳಿಗೆ ತೆಗೆದುಕೊಂಡು, ಅಲ್ಲೆಲ್ಲೋ ದೂರದಲ್ಲಿ ಹೋಗಿ 60 ರೂ.ಗಳಿಗೆ ಮಾರುತ್ತಾರೆ. ಅದರ ಬದಲು ಅಲ್ಲೇ ಅಂಗಡಿಗಳನ್ನು ಕೊಟ್ಟು ಬಿಟ್ಟರೆ, ಅವನು 60 ರೂ.ಗಳಿಗೆ full ಕುಡಿಯುತ್ತಾನೆ. Full excise ಇವರಿಗೇ ಬಂದು ಬಿಡುತ್ತದೆ. ಆದ್ದರಿಂದ, 14,500 ಕೋಟಿ ರೂ.ಗಳಿರುವುದು 16,000 ಕೋಟಿ ರೂ.ಗಳಿಗೆ ಬರುತ್ತದೆ ಎಂದು ಹೇಳುತ್ತೇನೆ. ಹೆಚ್ಚಿಗೆ ಕುಡಿಯುವುದು ಎಂದಲ್ಲ. ಎಲ್ಲರೂ ಯಾರೂ ಹೆಚ್ಚು ಕುಡಿಯಬಾರದು ಎಂದು ಹೇಳುತ್ತೇನೆ. ಹೆಚ್ಚಿಗೆ ಕುಡಿಯುವುದು ಎಂದಲ್ಲ. ಎಲ್ಲರೂ ಯಾರೂ ಹೆಚ್ಚು ಕುಡಿಯಬಾರದು ಎಂದು ಎಲ್ಲರೂ ಮಾತನಾಡುತ್ತಾರೆ. ಪ್ರತಿ ಸರ್ಕಾರದಲ್ಲೂ ಪ್ರತಿ ಬಾರಿ ಹತ್ತತ್ತು ಪರ್ಸೆಂಟ್ extra revenue ತೆಗೆದುಕೊಳ್ಳುತ್ತಿದ್ದಾರೆ. ಈ ಬಾರಿ 14,400 crore rupees. Next ಬಾರಿಗೆ ಬರುವಷ್ಟರಲ್ಲಿ 16,000 ಸಾವಿರ ಕೋಟಿ ರೂ.ಗಳಾಗುತ್ತದೆ. ನಾವು ಕುಡಿಯಬಾರದು ಎಂದು ಹೇಳುವುದು. ಅಲ್ಲಿ ಒಂದು ಹೇಳುತ್ತೇನೆ. Cigarette

smoking is injurious to health. Excessive intake of alcohol may cause harm to health. So excessive use, cigarette ಮಾತ್ರ it is injurious.

Alcohol if it is consumed in moderate quantities, it is not injurious to health. ಅದಕ್ಕಾಗಿ ಅದನ್ನು ಮಾಡಬೇಕೆಂದು ಹೇಳಿ ಇನ್ನು ಒಂದೆರಡು–ಮೂರು . .

ಉಪಾಧ್ಯಕ್ಷರು:– ಆಯಿತು. Conclude ಮಾಡಿ.

ಶ್ರೀ ಆರ್. ಜಗದೀಶ್ ಕುಮಾರ್:– ಮಾನ್ಯ ಉಪಾಧ್ಯಕ್ಷರೆ, ಇದಾದ ಮೇಲೆ ನಾನು ಇದನ್ನು ಹೇಳಿ ನಾಳೆ ಅದನ್ನು ಕಾಪಿ ಮಾಡಿ ಮಂತ್ರಿಗಳಿಗೂ ಕೊಡುತ್ತೇನೆ. ಮತ್ತೆ ಮಾನ್ಯ ಅಧ್ಯಕ್ಷರೆ, department ನಲ್ಲಿ confuse ಮಾಡಿಬಿಡುತ್ತಾರೆ. MSIL ನಲ್ಲಿ 463 ಅಂಗಡಿಗಳನ್ನು ಕೊಟ್ಟಿದ್ದೇವೆ ಎನ್ನುತ್ತಾರೆ. MSIL ನಲ್ಲಿ ಕೊಟ್ಟಿರುವುದು ರೂಲ್–12ರಲ್ಲಿ. ಅದರಲ್ಲಿ ರೂಲ್–12 ರಲ್ಲಿ ಏನಿದೆ ಎಂದರೆ, Retailer's License ಎಂದು ಇದೆ. ಮತ್ತೆ ರೂಲ್–11ರಲ್ಲಿ 11(C) ಎಂದು ಇದೆ. ಅ 11 (C) ಯಲ್ಲಿ the government shops are exempted from the quota. It should not be calculated for the quota. ಅದಕ್ಕಾಗಿ ಅದನ್ನು ದಯವಿಟ್ಟು ಇದರಲ್ಲಿ mix ಮಾಡಬೇಡಿ ಎಂದು ಕೇಳಿಕೊಂಡು ಈಗ ಹೊಸದಾಗಿ ಇವರು quota fix ಮಾಡಿದ ಮೇಲೆ next ಪ್ರತಿ ಊರಿನಲ್ಲೂ, ಪ್ರತಿ divisionನಲ್ಲೂ, 4–5 divisionಗಳಿವೆ, ಅಲ್ಲಿ lab ಇಲ್ಲ. ಇವರು ಪ್ರತಿಯೊಂದಕ್ಕೂ ಬೆಂಗಳೂರಿಗೆ ಬರಬೇಕು. ಒಬ್ಬರು Chief Chemist ಬೇರೆ ಕಡೆ ಇರುವವರು ಅವರು deputation ಮೇಲೆ ಬಂದು ಇಡೀ ರಾಜ್ಯದ ನಾಲ್ಕೂವರೆ ಸಾವಿರ ಅಂಗಡಿಗಳನ್ನು ಏನಾದರೂ seize ಆದರೆ, normal inspection ಆದರೆ, ಅದನ್ನು ಕಳುಹಿಸಿ ಬೆಂಗಳೂರಿನಲ್ಲಿ ಚೆಕ್ ಮಾಡಿಸಬೇಕು. ಅದಕ್ಕೆ ನಾನು ಹೇಳುವುದು 4 divisionಗಳಲ್ಲಿ 4 lab open ಮಾಡಿ, 4 permanent chemists ಅನ್ನು ನೀವು appoint ಮಾಡಿಕೊಂಡುಬಿಡಿ. ಏನೂ ತೊಂದರೆಯಾಗುವುದಿಲ್ಲ. ಮತ್ತೆ ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಒಂದು ಒಳ್ಳೆಯ system ಇದೆ. ನೋಡಿಕೊಳ್ಳುವುದಕ್ಕೆ excise D.C., Superintendent, Deputy Superintendent, Inspector, Sub-inspector, Head Guard & Guard ಇದ್ದಾರೆ. File, ಹೋಗುವಾಗ ಮಾತ್ರ ಬೆಂಗಳೂರಿನಲ್ಲಿ ಮತ್ತು ಕೆಲವು ಕಡೆಗಳಲ್ಲಿ ಆ Superintendent ಮತ್ತು Deputy superintendent ಗೆ file ಹೋಗುವುದಿಲ್ಲ. Direct ಆಗಿ inspector ತೆಗೆದುಕೊಂಡು ಹೋಗಿ ಅಲ್ಲಿ ಹಾಕಿಸಿಕೊಂಡು ಬರುತ್ತಾರೆ. Responsibility ಎಲ್ಲರದ್ದೂ ಇರುತ್ತದೆ. Approval ಮಾತ್ರ ಒಬ್ಬರದೇ ಇರುತ್ತದೆ. ಆ ರೀತಿ

ಆಗಬಾರದು. In a department, all the people in the hierarchy should be equally responsible, not only for the approval, but for regulation also. ಮತ್ತೆ ಅಲ್ಲಿ ಬಹಳ ಒಂದು ಒಳ್ಳೆಯ ಸಂಗತಿ ಇದೆ ಅಧ್ಯಕ್ಷರೆ.

ಉಪಾಧ್ಯಕ್ಷರು:– ಆಯಿತು. Conclude ಮಾಡಿ.

ಶ್ರೀ ಆರ್. ಜಗದೀಶ್ ಕುಮಾರ್:– ಮಾನ್ಯ ಉಪಾಧ್ಯಕ್ಷರೆ, ಎರಡೇ ನಿಮಿಷದಲ್ಲಿ ಮುಗಿಸುತ್ತೇನೆ. ಪ್ರತಿ sentence ನಲ್ಲೂ ಕೂಡ I am coming out with new facts. I am not repeating the same facts. Every sentence is with a new fact. Excise DCs are only recommending bodies to issue a license. License is issued by a revenue DC. ನಾಳೆ ಏನಾದರೂ ಅಲ್ಲಿ excise ಅನಾಹುತವಾದರೆ excise DC ಯನ್ನು suspend ಮಾಡುತ್ತೇವೆ. ಏನಾದರೂ ಹೆಚ್ಚು ಕಡಿಮೆಯಾದರೆ, excise DC is held responsible. Issuing authority ಮೊದಲು arrack ಇದ್ದಂತಹ ಸಂದರ್ಭದಲ್ಲಿ misuse ಆಗುತ್ತದೆ ಎಂದು ಹೇಳಿ, excise DC ಯಿಂದ ತೆಗೆದು revenue DCಗೆ ಕೊಟ್ಟಿದ್ದರು. ನಾನು ಒಂದೇ ಒಂದು ಮನವಿಯನ್ನು ಮಾಡಿಕೊಳ್ಳುತ್ತೇನೆ ತಮ್ಮ ಮೂಲಕ. ದಯವಿಟ್ಟು ಆ ನಮ್ಮ power ಏನಿತ್ತೋ, ಅದನ್ನು ವಾಪಸ್ ನಮ್ಮ excise DCಯವರಿಗೇ ಕೊಡಿ. Because he is the uultimate responsible person. ಇನ್ನೊಂದು ಆಗುತ್ತದೆ ಅಧ್ಯಕ್ಷರೆ. KSBCL ಎಂಬುದೊಂದು ಇದೆ, ಇದರ ಬಗ್ಗೆ ತಮಗೆ ಗೊತ್ತಿದೆ. KSBCL ಏನೆಂದರೆ, selling agency, distributor's license ಇದೆ. ಅವರು ಅಂಗಡಿಯಿಂದ distributor ನಿಂದ supply ಮಾಡುತ್ತಾರೆ ಅಧ್ಯಕ್ಷರೆ. ಆದರೆ quota ಇಷ್ಟು ತೆಗೆದುಕೊಳ್ಳಬೇಕು ಎಂದು ಹೇಳಿ, excise department ನವರೇ ಹೋಗಿ ಕೇಳಬೇಕು. ತಮಾಷೆ ಏನೆಂದರೆ, excise department is a regulatory authority. He should also act as a facilitator for sale of the liquor. ಅದನ್ನು ದಯವಿಟ್ಟು ತೆಗೆದು ಹಾಕಿ. ಅದನ್ನು ತೆಗೆದು ಬಿಟ್ಟು, ನಾನು ಮಾನ್ಯ ಮಂತ್ರಿಗಳ ಹತ್ತಿರ ಕೇಳಿಕೊಳ್ಳುವುದೇನೆಂದರೆ, sales ಏನಿದ್ದರೂ KSBCL ನವರು ಮಾಡಲಿ. Sales, promotion ಎಲ್ಲವನ್ನೂ ಅವರು ಮಾಡಲಿ. Regulation ಮಾತ್ರ ಈ

ನಮ್ಮ Excise Department ನವರು ಮಾಡಿದರೆ ಒಳ್ಳೆಯ ಹಿಡಿತ ಸಿಗುತ್ತದೆ. KSBCL ನವರನ್ನೂ ಸಹ inspection ಗೆ ಒಳಪಡಿಸಬೇಕು. ಈಗ ಏನಾಗಿದೆ ಎಂದರೆ, KSBCL ಎಂದರೆ, ಅಲ್ಲಿ ಯಾರೋ Joint Commissioner ಇರುತ್ತಾರೆ ಮತ್ತು ಅಲ್ಲಿ IAS ಅಧಿಕಾರಿಗಳು ಇರುತ್ತಾರೆಂದು ಇವರು ಅಲ್ಲಿಗೆ ಹೋಗುತ್ತಿಲ್ಲ. He is only a distributory licensee who is holding the license issued by the department. So, they should go for inspection. ಎಲ್ಲಾ 3,000 ರಿಂದ 3,500 ಅಧಿಕಾರಿಗಳಿದ್ದಾರೆ. Guard ನಿಂದ ಎಲ್ಲರಿಗೂ ದಯವಿಟ್ಟು ಒಂದು common mobile phone ಕೊಡಿಸಿ. ಅವರೆಲ್ಲರೂ connections ನಲ್ಲಿ ಇರುವಂತೆ ಮಾಡಿ. ಅವರೆಲ್ಲರಿಗೂ ಸಹ quarters ಇಲ್ಲದಿದ್ದರೆ ತೊಂದರೆಯಾಗುತ್ತದೆ. ಇಲ್ಲಿ ಏನಾಗುತ್ತಿದೆ ಎಂದರೆ, ಬೆಂಗಳೂರಿನಲ್ಲಿ guard ಕೆಲಸದಲ್ಲಿ ಇರುತ್ತಾನೆ, ಮನೆ ಇರುತ್ತದೆ, ಅವನು ಮೈಸೂರಿನಲ್ಲಿ ಕೆಲಸ ಮಾಡುತ್ತಾನೆ. ಇವನು ಹೋಗಿ ನೋಡಿಕೊಂಡು ಬರುವಷ್ಟರಲ್ಲಿ ಏನೂ ಕೆಲಸ ಆಗುವುದಿಲ್ಲ. In-charge ಹಾಕುವಂತಹ ಸಂದರ್ಭದಲ್ಲಿ that is a privilege of the Commissioner. At his discretion incharge ಹಾಕಬೇಕು, Government ನಿಂದ order ಆಗುವುದು ಬೇಡ. Distillery ಗೆ ಒಬ್ಬರು inspector ಅನ್ನು ಹಾಕಿರುತ್ತಾರೆ. ಅವರನ್ನೇ range ಗೂ ಹಾಕಿರುತ್ತಾರೆ. Distillery ಗೆ ಏಕೆ ಹಾಕುವುದು? ಬೆಳಿಗ್ಗೆಯಿಂದ ರಾತ್ರಿಯತನಕ ನಡೆಯುವಂತಹ ಸಂದರ್ಭದಲ್ಲಿ ಯಾವುದೇ irregularity ನಡೆಯಬಾರದು ಎಂದು ಅವರನ್ನು ಹಾಕುತ್ತೇವೆ. ಅವರನ್ನೇ range ಗೂ ಸಹ ಹಾಕಿದರೆ, ಅವರು ಎರಡೂ ಕಡೆ ನೋಡಿಕೊಳ್ಳುವುದಕ್ಕಾಗುವುದಿಲ್ಲ. ಇದಕ್ಕೆ ಇಂತಹ ಒಂದು ಒಳ್ಳೊಳ್ಳೆಯ ಜಾಗದಲ್ಲಿ independent ಆಗಿ ಒಬ್ಬೊಬ್ಬರನ್ನು post ಮಾಡಬೇಕೆಂದು ಹೇಳುತ್ತೇನೆ. ಈ SC/STಗಳಿಗೆ, ಮೊನ್ನೆ ಮಾನ್ಯ ಅಧ್ಯಕ್ಷರು ಇಲ್ಲಿ ಕುಳಿತಿದ್ದಾಗ ಹೇಳುತ್ತಿದ್ದರು, ನನಗೆ ಬಹಳ ಸಂತೋಷ ಇದೆ, ನಾನು ಆತ್ಮವಿಶ್ವಾಸದಿಂದ ಹೇಳುತ್ತೇನೆ, ಏಕೆಂದರೆ, ನಾನು ಕಾಗೋಡಿನಲ್ಲಿ ಸತ್ಯಾಗ್ರಹ ಮಾಡಿದ ಮೇಲೆ ಗೇಣಿದಾರರೆಲ್ಲರಿಗೂ ನಾನು ಅವರವರ ಜಮೀನನ್ನು, ಉಳುವವರಿಗೇ ಭೂಮಿ ಎಂದು ಕೊಡಿಸಿದೆ ಎಂದು ಹೇಳಿದರು.

ಆದರೆ ನನ್ನ ಕೈಯ್ಯಲ್ಲಿ ಆ ಕೆಲಸ ಆಗುವುದಿಲ್ಲ. SC/STಗಳಿಗೆ ಏನೊಂದು constitutional right ಬಂದಿಲ್ಲ, ಅದರ ಬಗ್ಗೆ ಯೋಚನೆ ಮಾಡಿ. ಬಹಳ ಜನ ಏನು ಹೇಳುತ್ತಾರೆ ಎಂದರೆ, ಏನಯ್ಯ SC/STಗಳಿಗೆ ವೈನ್ ಸ್ಟೋರ್ ಕೊಡಿಸುವುದಕ್ಕೆ ಹೋಗುತ್ತಿದ್ದೀಯಲ್ಲಾ? ಅವರು ವೈನ್ ಸ್ಟೋರ್ಸ್‌ನಲ್ಲಿ ಮಾರುವುದಕ್ಕೆ ಆಗುತ್ತದೆಯೇ? ಅದೂ ಇದೂ ಎಂದು ಹೇಳುತ್ತಾರೆ. 1 ಕೋಟಿ ರೂ.ಗಳಿದೆ. Unofficial premium for an excise license given

by the Government which is a privilege of the Government is 1 crore in the unofficial market. ದಯವಿಟ್ಟು ಎಸ್.ಸಿ./ಎಸ್.ಟಿ.ಗೆ ಒಂದು CL-2 ಕೊಟ್ಟರೆ 5 ರಿಂದ 6 ಸಂಸಾರಗಳು ಅದರಲ್ಲಿ ಜೀವನ ಮಾಡಬಹುದು. ಆದ್ದರಿಂದ ಎಸ್.ಸಿ./ಎಸ್.ಟಿ. ವರ್ಗದಲ್ಲಿ ಚೆನ್ನಾಗಿ ಓದಿರುವ ನಿರುದ್ಯೋಗಿ ಯುವಕರು ಯಾರಿದ್ದಾರೆ ಅವರಿಗೆ ಏನು ತುಂಬಾ ಹಣ ಬೇಕಾಗಿರುವುದಿಲ್ಲ ಅಂತಹವರಿಗೆ ಹೊಸ quota ದಲ್ಲಿ ದಯವಿಟ್ಟು ಕೊಡಿ ಎಂದು ನಮ್ಮ ಡಿಸ್ಟಲರಿಗಳಲ್ಲಿ only ಈ sweet potato ಅನ್ನು molasses ನಿಂದ ಮಾಡುವುದಕ್ಕೆ ಕೊಡುತ್ತೇವೆ. ದಯವಿಟ್ಟು rotten food grain ನಿಂದ ನಮ್ಮಲ್ಲಿ concept ಹೇಗೆ ಎಂದರೆ, ಅಯ್ಯೋ food grain ದು ಡಿಸ್ಟಲರಿಗೆ ಕೊಟ್ಟುಬಿಟ್ಟರೆ ಬೇರೆ ಎಲ್ಲಾ food grain ಅನ್ನು ಅವನು divert ಮಾಡಿಬಿಡುತ್ತಾನೆ. There will be a shortage ಎನ್ನುತ್ತಾರೆ. ಯಾವ shortage ಕೂಡ ಬರುವುದಿಲ್ಲ. Rotten food grain ನಿಂದ ಮಾಡುವಂತಹ ಡಿಸ್ಟಲರಿಗಳಿಗೆ ತಾವು ದಯವಿಟ್ಟು permission ಕೊಡಬೇಕೆಂದು ಹೇಳಿ ಈ Excise D.C. ಗಳಿಗೆ ಇನ್ನೊಂದು ತೊಂದರೆಯಿದೆ. ಮೆಥನಾಲ್ ಕುಡಿದು ಯಾರೋ ಸತ್ತು ಹೋದರೂ ಕೂಡ Excise D.C.ಅನ್ನು ಅಲ್ಲಿ suspend ಮಾಡಿಬಿಡುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ:- ಎಸ್.ಸಿ./ಎಸ್.ಟಿ ವರ್ಗಗಳ ಬಗ್ಗೆ ಸ್ವಲ್ಪ ಕಳಕಳಿಯಿಂದ ಕಾಳಜಿಯಿಂದ ಮಾತನಾಡುತ್ತಿದ್ದಾರೆ. ಮಾತನಾಡಲಿ. ಏಕೆಂದರೆ, ಉಳಿದವರು ಮಾತನಾಡುವುದಕ್ಕೆ ಕಷ್ಟವಾಗುತ್ತದೆ. ಪಾಪ ಮಾತನಾಡಲಿ.

ಶ್ರೀ ಆರ್. ಜಗದೀಶ್ ಕುಮಾರ್:– ಸಾರಾಯಿ ಬಗ್ಗೆ, ಸಾರಾಯಿ ಬಗ್ಗೆ ಎಂದು ಹೇಳುತ್ತೇವೆ. 15 ಸಾವಿರ ಕೋಟಿ ರೂಪಾಯಿಗಳು ಬರುತ್ತಿದೆ. No body can dispute the fact that it is the major contributor to the receipts of that budget. ಆದ್ದರಿಂದ ಅದನ್ನು ಹೇಳಿ ಮತ್ತೆ ಈ ಮೆಥನಾಲ್‌ಗೆ ಸಂಬಂಧಿಸಿದಂತೆ ಯಾರೋ ಮೆಥನಾಲ್‌ಅನ್ನು ಎಲ್ಲೋ ಬೆರೆಸಿ ಸತ್ತರೆ ಈ ಡಿ.ಸಿ.ಯನ್ನು suspend ಮಾಡಿಬಿಡುವುದು. Issue ಮಾಡುವ Revenue D.C.ಗೆ ಏನೂ ತೊಂದರೆಯಿಲ್ಲ. Recommend ಮಾಡಿರುವ Excise D.C.ಗೆ ತೊಂದರೆಯಾಗುತ್ತದೆ. ದಯವಿಟ್ಟು ನಾನು ಕೇಳಿಕೊಳ್ಳುವುದು ಇಷ್ಟೆ. ಈಗ ಮರ್ಡರ್ ಆದ ತಕ್ಷಣ sub inspector ಅನ್ನು ಅಥವಾ inspector ಅನ್ನು suspend ಮಾಡುತ್ತೇವಾ? ಹಾಗೆಯೇ excise ನಲ್ಲಿ ಯಾರಾದರೂ ತಪ್ಪು ಮಾಡಿದರೆ after due enquiry suspend ಮಾಡಿ. ಇವರು ಏನು ಮಾಡುತ್ತಾರೆ ಎಂದರೆ, press ನಲ್ಲಿ ಒಂದು statement ಕೊಡಬೇಕೆಂದು 5 deaths due to excessive consumption of alcohol or methanol mixed alcohol ಎಂದು ಹೇಳಿ immediate ಆಗಿ ಆ ಡಿ.ಸಿ.ಯನ್ನು suspend ಮಾಡುತ್ತಾರೆ. ಅವರು 6 ತಿಂಗಳುಗಳ ಕಾಲ ಅಲ್ಲಿ ಓಡಾಡುತ್ತಿರುತ್ತಾನೆ. ಹಾಗೆ ಮಾಡುವುದು ಬೇಡ. ಆಮೇಲೆ ಮೆಥನಾಲ್ ಮೇಲೆ Excise Department ಗೆ ಏನೂ ಕಂಟ್ರೋಲ್ ಇಲ್ಲ. Production and sale of methanol ಮೇಲೆ ಅವರಿಗೆ ಯಾವುದೇ ರೀತಿಯ ಕಂಟ್ರೋಲ್ ಇಲ್ಲವೆಂದು ಇದರ ಬಗ್ಗೆ ತಾವು ಯೋಚನೆ ಮಾಡಿ ಎಂದು ಹೇಳಿ ಈ reorganisation ಮಾಡದೇ ಇದ್ದರೆ ಬಹಳ ತೊಂದರೆಯಾಗುತ್ತದೆ ಎಂದು ಹೇಳಿ ಒಂದೇ ಒಂದು ಸಣ್ಣ ವಿಚಾರ ಹೇಳಿಬಿಡುತ್ತೇನೆ. ನಾನು ಮಂಡ್ಯ district ನ swimming championship ನಲ್ಲಿ represent ಮಾಡುತ್ತಿದ್ದಾಗ senior, junior, sub-junior ಎಂದು ಇದ್ದರು. ನಾನು ಸ್ವಲ್ಪ ಕುಳ್ಳಗಿದ್ದೆ ಅದಕ್ಕೆ sub-sub-junior ಎಂದು ಮಾಡಿದರು. ಆ ರೀತಿಯಾಗಿ press ಎಲ್ಲಾ ಹೋದಮೇಲೆ ಅಲ್ಲಿ ಯಾರೂ ಅಬಕಾರಿ ಅಧಿಕಾರಿಗಳು ಇಲ್ಲದೇ ಇದ್ದಾಗ ನನ್ನ request ಗೆ ಮಾನ್ಯ ಮಂತ್ರಿಗಳು ಕುಳಿತಿರುವಂತಹ ಸಂದರ್ಭದಲ್ಲಿ ನಾನು DD MLA ಎಂದು

ಅನ್ನಿಸಿಕೊಳ್ಳಬಾರದು ಎನ್ನುವುದಕ್ಕಾಗಿ ತಾವು ನನಗೆ ಒಂದು ಈ opportunity ಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ವಂದನೆ ಮಾಡುತ್ತಾ, ಈ print out ಅನ್ನು ತೆಗೆದುಕೊಂಡು ಹೋಗಿ ನಾಳೆ ನನ್ನ ಕ್ಷೇತ್ರದಲ್ಲಿ ಹಂಚುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಉಪಾಧ್ಯಕ್ಷರೆ, ಒಂದೇ ಶಬ್ದವಿದೆ. ಈಗ Excise Minister ಇಲ್ಲಿಯೇ ಇದ್ದಾರೆ. ಈಗ ಎಲ್ಲಿ ಹೋದಲ್ಲಿಯೂ ಕೂಡ Wine Shop ಎಂದು ಇರುತ್ತದೆ. ಆ Wine shop ನಲ್ಲಿ ಎಲ್ಲಿಯೂ wine ಇರುವುದಿಲ್ಲ. ಆದರೆ, ಬೋರ್ಡ್ ಮಾತ್ರ Wine Shop ಎಂದು ಇರುತ್ತದೆ. ಆದರೆ, ದಯಮಾಡಿ ನಿಮ್ಮ ಕಾಲದಲ್ಲಿ ಆ Wine Shop ಅನ್ನು ತೆಗೆಯಿರಿ. ಬೇಕಾದರೆ Brand Shop ಅಥವಾ Whisky ಎಂದು ಹಾಕಿ. Liquor shop ಎಂದಾದರೂ ಹಾಕಿ.

ಉಪಾಧ್ಯಕ್ಷರು:– ಈಗ ಸಮಯ ಆಗಿರುವುದರಿಂದ ನಿಮಗೆಲ್ಲಾ ನಾಳೆ ಸಮಯಾವಕಾಶ ಕೊಡುತ್ತೇವೆ.

ಶ್ರೀ ಜಿ.ಹೆಚ್. ಶ್ರೀನಿವಾಸ್ (ತರೀಕೆರೆ):– ನಾಳೆ ಕೊಡುವುದಿಲ್ಲ. ಎರಡು ನಿಮಿಷಗಳ ಕಾಲಾವಕಾಶ ಕೊಡಿ. ನಾಳೆ ಕೊಡಬೇಕು.

ಉಪಾಧ್ಯಕ್ಷರು:– ನಾಳೆ ಖಂಡಿತವಾಗಿಯೂ ಕೊಡುತ್ತೇವೆ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ನಮ್ಮ ಹೆಸರುಗಳೆಲ್ಲಾ ಬರೆದುಕೊಳ್ಳಿ.

ಉಪಾಧ್ಯಕ್ಷರು:– ಎಲ್ಲರ ಹೆಸರುಗಳನ್ನು ಬರೆದುಕೊಳ್ಳಿ. ಈ ಭಾಗದಲ್ಲಿರುವವರಿಗೆಲ್ಲಾ ನಾಳೆ ಅವಕಾಶ ಕೊಡುತ್ತೇನೆ.

ಡಾ|| ಉಮೇಶ್ ಜಾಧವ್:– ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರುಗಳೆಲ್ಲಾ ಮಾತನಾಡುವುದಕ್ಕೆ ಸಮಯ ಮಾಡಿ ಕೊಡಿ.

ಉಪಾಧ್ಯಕ್ಷರು:– ಆ ರೀತಿ ಏನಿಲ್ಲಾ, ಖಂಡಿತಾ ನಿಮಗೆಲ್ಲಾ ಅವಕಾಶ ಕೊಡುತ್ತೇವೆ. ನಾಳೆ ಮತ್ತು ನಾಳಿದ್ದು ಎರಡೂ ದಿವಸ ಚರ್ಚೆ ಇರುವುದರಿಂದ

ಕೊಡುತ್ತೇವೆ. ಈಗ ಮಾನ್ಯ ಕಾನೂನು ಸಚಿವರು ಪ್ರಶ್ನೋತ್ತರಗಳ ಬಗ್ಗೆ ಸದನದಲ್ಲಿ lay ಮಾಡುವರು.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ, ಪಶು ಸಂಗೋಪನೆ ಮತ್ತು ಮಾನವ ಹಕ್ಕುಗಳ ಸಚಿವರು):– (ಪ್ರತಿ ಲಗತ್ತಿಸಿದೆ)

12. ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸಲಾಯಿತು.

ಅನುಬಂಧ–2 ರಿಂದ 5.

ಕರ್ನಾಟಕ ವಿಧಾನಸಭೆ

ಹದಿನಾಲ್ಕನೇ ವಿಧಾನಸಭೆ

ನಾಲ್ಕನೇ ಅಧಿವೇಶನ

ಗುರುವಾರ, ದಿನಾಂಕ 24ನೇ ಜುಲೈ, 2014

ದಿನಾಂಕ: 24.07.2014ರ ಇಪ್ಪತ್ತನಾಲ್ಕನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 145 ಪ್ರಶ್ನೆಗಳ ಪೈಕಿ 122 ಪ್ರಶ್ನೆಗಳ ಉತ್ತರಗಳನ್ನು ಮತ್ತು ತಡೆಹಿಡಿಯಲಾದ 5 ಪ್ರಶ್ನೆಗಳ ಉತ್ತರಗಳನ್ನು (ಅನುಬಂಧ–2) (ಭಾಗ–II)

ಮತ್ತು

ದಿನಾಂಕ: 21.07.2014ರ ಇಪ್ಪತ್ತೊಂದನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 11 ಪ್ರಶ್ನೆಗಳ ಉತ್ತರಗಳನ್ನು ಹಾಗೂ ಲಿಖಿತ